Regd No. M 1299 ॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥ ಬಿಡಿ ಸಂಚಿಕೆ ೩ ಪೈ

ಸತ್ಯವಾದಿ

ವರ್ಷಕ್ಕೆ ರೂ. 1—0—0 (ಮೈಸೂರು ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತಗೊಂಡು) ವರ್ಷಕ್ಕೆ ರೂ. 1—10—0
ಸ್ಥಳಕ್ಕೆ ಪ್ರತಿ ಬುಧವಾರ ಪ್ರಕಟಿಸಲ್ಪಡುವುದು ಪರಸ್ಥಳಕ್ಕೆ

ಸಂಪುಟ 19] ಮೈಸೂರು. ಬುಧವಾರ 29 ನೆ ಏಪ್ರಿಲ 1936 [ಸಂಚಿಕೆ 33

ಮೈಸೂರು ಎಸ್. ಎನ್. ಪಂಡಿತರ

ಬಿಳೀಹಲ್ಲುಪುಡಿ! - ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್ಟ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯಾಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಟಣ 1 ಕ್ಕೆ (ಸಿಹಿ, ಉಪ್ಪು) 9 ಪೈ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿಕ್ 1/8 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯುಂಡ ಬರುವ ಟೂತ್‌ಪೇಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಳನವನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ತರ್ಕರ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಬಂದಾಪರ್ತಿಪರೀಕ್ಷಿಸಿ ನೋಡಬೇಕಾದ್ದು. ಟಿಕ್ 1 ಕ್ಕೆ 5 ಆಣೆ.

[ಸರಾ:—ಬೇಲಿನ ಪುಡಿಗಳಲ್ಲಿ ಬತ್ತದಹೊಟ್ಟಿನಬೂದಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಕೊಡಲ್ಪಡುವುದು. ಸಮ್ಮೆಲ್ಲ ಎಲ್ಲಾ ವಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್ ಎಸ್. ಎನ್. ಪಂಡಿತ್ ಅಂಡ್ ಸನ್ಸ್ Manufg Chemists Druggists & Physician

ಮಳವಳ್ಳಿ ಏಜೆಂಟರು: ಮಿ| ಜಿ. ಎಸ್. ವೆಂಕಟರಾವ್

ಆಡ್ರೆಸ್ ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ ೧೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

Season Deposits

Not exceeding Rs. 25,000 and falling below Rs. 500 from any one individual are received at Head Office and Branches of the Quilon Bank, Limited, from 15 th March to 15 th May, 1936, maturing from June to August at 3½ per cent interest per Annum.

Remittances received at par at all Branches and Agencies.

The Quilon Bank

(Incorporated in Travancore, 1919)

Salem conversion Affair

As public interest is being roused with regard to the conversion affair in the Harijan Cheri of the Hemapalli village in Tiruchangode Taluk I visited the village this morning and the following are the details gathered.

The place is a desert-looking unimpressive village. The very first man I met told me that he and the members of about sixty houses in the cheri had consented to join Catholism and were attending the catachism classess, in the morning and evening. The classess to these Harijans are held about break of dawn for about one hour and in the dusk time. The rest of the day the Harijahs spend in their homes or in the streets. For the time being, they do not go ont in search of work nor even attend to their fields, which many of them own. (Hindu)

ಗುರುಪ್ರಸಾದ

——————

" ಹೀಗೆ ಬಾ " ಎಂದು ತಲೆಯನ್ನಲ್ಲಾಡಿಸಿ ಕರೆದನು ತಾತನು.

ನೋಡಿದಳು. ಕರೆಯುತ್ತಿರುವನೆಂದು ಗ್ರಹಿಸಿದಳು. ಸಮೀಪಕ್ಕೆ ಹೋಗೋಣವೇ ಬೇಡವೇ ಎಂದು ಯೋಚಿಸುತ್ತಿರುವಳಂತೆ ಒಂದು ಕ್ಷಣ ಮುಂದಕ್ಕೆ ಹೆಜ್ಜೆ ಹಾಕದೆ ನಿದಾನಿಸಿದಳು. ಪುನಃ ಏನೆಂದು ಕೊಂಡಳೋ, ಮುಂದೆ ಹೆಜ್ಜೆಯನ್ನಿಟ್ಟು ನಡೆದಳು.

ಜಗಲಿಯ ಕೊನೆಯಲ್ಲಿ ಕಂಭಕ್ಕೆ ಒರಗಿಕೊಂಡು ಕಾಲುಮೇಲೆ ಕಾಲುಹಾಕಿಕೊಂಡು ಮೇಲಿನ ಕಾಲನ್ನು ಅಲ್ಲಾಡಿಸುತ್ತಾ- ಸುಖರೀತಿಯಲ್ಲಿ ಕುಳಿತಿದ್ದ ತಾತನು ಹಾಗೆಯೇ ಕೆಳಗಿಳಿದು ರಸ್ತೆಯ ಮಧ್ಯೆ ಹೋಗಿ ಗಟ್ಟಿಯಾಗಿ.

ಏ, ಹುಡುಗೀ ! ಎಂದು ಕರೆದನು.

ಮಯ್ಯಾರದೊಡನೆ ತಿರುಗಿನೋಡಿ. ಆ ಹುಡುಗಿಯು ದೂರದಲ್ಲಿಯೇ ನಿಂತುಕೊಂಡುಬಿಟ್ಟಳು.

" ನಿನ್ನನ್ನೇ ಕರೆಯುತ್ತಿರುವದು " ಎನ್ನುತಾತ್ಕೈಯಿಂದ ಬರಲಿಕ್ಕೆ ಸಂಜ್ಞೆಮಾಡಿದನು.

ಒರತ್ತಿದ್ದಾಳೆ; ತಾತನು ಅರ್ಧನುಗೆದು ನಿಂತಿರುವದನ್ನು ನೋಡಿ ಹೋಗಿ ಆ ಹುಡುಗಿಯ ಮೃದುಹಸ್ತವನ್ನು ಪ್ರೀತಿಯಿಂದ ಹಿಡಿದು ಕರೆದುಕೊಂಡು ಒಂದನು.

" ಬಾ ಇಲ್ಲಿ ಕೂತುಕೋ " ಎನ್ನುತಾತ್ತಾ ತನ್ನ ಪಕ್ಕದಲ್ಲಿ ಕುಳಿತುಕೊಳ್ಳಲು ಸ್ಥಳವನ್ನು ತೋರಿಸಿದನು. ಆದರೆ ಆ ಹುಡುಗಿಯು ಹೀಗೆ ಹಾಗೆ ನೋಡುತ್ತಾ ಏನು ಮಾತನಾಡದೆ ನಿಂತುಬಿಟ್ಟಳು.

" ಭಯವೇ ? "

ಅರ್ಥವಾಗದಂತೆ ನಟಿಸುತ್ತಾ ತಾತನ ಕಡೆ ನೋಡಿದಳು.

" ನಾಚಿಕೆಯೇ ? "

ಹಸುನಗು ನಗಲಾರಂಭಿಸಿದಳು. ತಾತನು ಕೂಡಾ ನಗುತ್ತಾ

" ಎಲ್ಲಿ, ಏನಾತನಾಡು ನೋಡೋಣ. ಎಷ್ಟು ಮುತ್ತುಗಳು ಬೀಳುವವೋ ! "

" ಏನರೀ ನೀವು ಮುತ್ತೂ "

" ನಿನ್ನ ಹೆಸರೇನಮ್ಮಾ "

" ನವ ಎಲ್ಲಿಕ "

" ಓಹೋ ! ಬಹಳ ಸೊಗಸಾದ ಹೆಸರು. ಬಹಳ ಅಂದವಾಗಿಯೇ ಇದೆ. ನೀನು ಪಂಕಜಂ ಮೊಮ್ಮಗಳಲ್ಲವೇ ? "

" ಹೌದರಿ "

" ಹೋಲಿಕೆ ನೋಡಿ ಅಂದುಕೊಂಡೆ, ನಿನ್ನ ವಯಸ್ಸಿನಲ್ಲಿ ನಿಮ್ಮ ಅವ್ವ. ನಿನ್ನಂತೆಯೇ ಊಹೂ, ಇನ್ನೂ ಸ್ವಲ್ಪ ಸ್ಥೂಲವಾಗಿದ್ದಳು. ಆದರೆ ಇನ್ನೂ ಹೇಳಲೇ ಇಲ್ಲ. ಗಂಡು ಮಗುವನ್ನು ಸಂಪಾದಿಸಿರುವೆಯೋ ಇಲ್ಲವೋ "

ನಾಚಿಕೆಯಿಂದ ತಲೆಬಗ್ಗಿಸಿಕೊಂಡಳು. ತಾತನು ಪಕ್ಕಕ್ಕೆ ಎಳೆದುಕೊಂಡು ತಲೆಯನ್ನು ಕೈಯಿಂದ ಸವರಿ ಲಘುವಾದ ಒಂದು ಮುತ್ತನ್ನು ಕೊಟ್ಟ.

" ಯಾಂತಾದರೂ ಬ್ರಾಹ್ಮಣ ಹುಡುಗನ್ನ..... ಏನು ? ಮೊದಲಿನಿಂದಲೂ ನಾವೇ ನಿಮ್ಮ ಮನೆಗೆ ಸರಿಯೋಗಿರುವರು.....ಸೈ !

ನಕ್ಕಳು.

" ಆ.....ಇನ್ನು ಹೋಗಿ ಬಾ.....ದೇವಾಲಯಕ್ಕೇನೋ ? "

ಹೌದೆಂದು ತಲೆಯನ್ನಲ್ಲಾಡಿಸಿದಳು

ಆತನು ನಗುತ್ತಾ

" ಕಾಮುದೇವ ಉಪಾಸನೆಯನ್ನು ಮಾಡಬೇಕಾಗಿರುವ ಕಾಲದಲ್ಲಿ.....ನಿನಗೆ ನಂದಿಯ ಕಿವಿಗಳ ಮೂಲಕ ಶಿವದರ್ಶನವೇಕಮ್ಮಾ ! ಕಲ್ಪ, ಪೂಜಾ ವಿಧಾನ ಹೇಳುತ್ತೇನೆ—ನ್ನುಂದೆ ಲಭಿಸಿದವನ್ನು ನೋಡಿಕೊಳ್ಳಬೇಕಾಗಲಿ ನಿನ್ನ ಅವ್ವನಂತೆ ಅಷ್ಟು ವಯಸ್ಸು ಬಂದನಂತರ ' ಹರಿಃ ಓಂ ' ಎನ್ನಲಿ ಬಿಟ್ಟಾದೀತು ?" ಎಂದನು.

ಆ ಹುಡುಗಿಯು ವೈಯ್ಯಾರದೊಡನೆ ಕುಲುಕುತ್ತಾ.

" ಹೋಗಿಬರತ್ತೇನರಿ " ಎಂದಳು.

ಒಳ್ಳೇದಾಗಲಿ ಹೋಗಿಬಾಮ್ಮಾ..... ಯಾವತ್ತಾದರೂ ಈ ದಾರಿಯಲ್ಲಿ ಒಂದಾಗ ನನ್ನ ಮೇಲೆ ಕೂಡ ನಿನ್ನ ದೃಷ್ಟಿಯನ್ನು ಹಾಕುತ್ತಿರು. ನಾನೇನು ಬೇರೆಯವನಲ್ಲ. ಎಂದು ಕಣ್ಣುಗಳನ್ನು ಮಿಟಿಕಿಸುತ್ತಾ ಮಂದಹಾಸದೊಡನೆ ನುಡಿದನು.

೨

" ಅವಧಾನೀ ! ಏನು ಮಾಡುತ್ತಿದ್ದೀ ? " ಹೀಗೆಂದು ಹೇಳುತ್ತಾ ಮನೆಯ ಕಡೆ ದೃಷ್ಟಿಯನ್ನಿಟ್ಟನು ತಾತನು.

" ಲಿಂಗಾನುಶಾಸನವನ್ನ ಓದುತ್ತಿದ್ದೇನೆ ಸ್ವಾಮಿ ! " ಎನ್ನುತಾತ್ತಾ ತಾತನನ್ನು ಸಮೀಪಿಸಿದನು

" ನೋಡು, ಅಲ್ಲಿ ಮುಂದೆ ಹೋಗುತ್ತಿದ್ದಾಳಲ್ಲಾ, ಆ ಕಪಿಲಬಣ್ಣದ ಸೀರೆಯನ್ನುಟ್ಟಿರುವ ಹುಡುಗಿ ದೇವಾಲಯಕ್ಕೆ ಹೋಗುತ್ತಿರುವಳಾಗಲಿ, ಅಲ್ಲಿಯವರೆವಿಗೂ ಹೋಗಿ, " ಎಲ್ಲಿರೂ ಕ್ಷೇಮದಿಂದಿರವರೇ ', ನಮ್ಮ ಗುರುಗಳು ಕೇಳಿಬರಲಿಕ್ಕೆ ಹೇಳಿದರು, ಎಂದು ಕೇಳಿಬಾ.

ಅವಧಾನಿಯು ಗಾಂಭೀರ್ಯದಿಂದ ನಿಂತಬಿಟ್ಟನು

ಎಲೊ ! ಏನು ಹೀಗೆ ನಿಂತಬಿಟ್ಟೆ, ನಮ್ಮವರೇ ನನು ಅಷ್ಟರವರೆಗೂ ಹೋಗಲಾಂದೆ ನಿನ್ನನ್ನು ಕಳುಹಿಸುವದು. ಇಷ್ಟು ಮಾತ್ರ ಮಾಡದನು.....

" ಹೋಗು " ಎಂದ ಗದರಿಸಿ ಕಳುಹಿಸಿದನು ಶಿಷ್ಯನು ಹೋದನಂತರ ಸಾವಕಾಶವಾಗಿ ನನುನಗೆಯೊಂದಿಗೆ ನನ್ನ ಕಡೆ ನೋಡಿದನು

ನಾನೂ ನಗುತ್ತಾ ಈಚೆಗೆ ಒಂದು.

" ತಾತಯ್ಯಾ ! ಬಹಳ ಗಟ್ಟಿಗನು. ಇನ್ನೂ ಈ ಬುದ್ಧಿಯೇನೆ. ಹುಣಿಸೆ ಗಿಡ ಮುದಿಯಾದರೂ " ನಿನ್ನ ಮನೆ ಒಂಗಾರವಾಗ " ವಂದಿಯಾಗಲಿಲ್ಲ. ಚಿಗುರುತ್ತಿದೆ ಎನ್ನು. ಆದರೂ ನೀವೆಲ್ಲರೂ ಸ್ವಲ್ಪವೂ ಪ್ರಯೋಜನವಿಲ್ಲದವರು. ಎಷ್ಟು ಕೆಟ್ಟರೂ, ಸೂಳೆ ನಯ್ಯಾರದೊಂದಿಗೆ ಬೀದಿಯಲ್ಲಿ ನಡೆಯುತ್ತಿದ್ದರೆ, ಮಾತನಾಡಿಸದೆ ಇರುವಷ್ಟು ವಾರ್ಧಿಕ್ಯವು ಬಂದಿದೆಯೇ ನನಗೆ ?'

" ಆ ಹುಡುಗಿ ಏನಂದುಕೊಂಡಳೋ "

" ಏನೂ ಅಂದುಕೊಳ್ಳುವದಿಲ್ಲ ಅಷ್ಟಾಗಿ ರುಚಿಸದೆ ಹೂದಲ್ಲಿ ಮನೆಗೆ ಹೋಗಿ ಮೋರೆಯನ್ನು ಪುನಃ ಸಾಬೂನು ಹಾಕಿ ತೊಳೆದುಕೊಳ್ಳುತ್ತಾಳೆ "

ಸುಂದರಳೇ !

ಆ ನಿನ್ನಲ್ಲಿಯೂ ಸ್ವಲ್ಪ ರಾಸಿಕ್ಯವು ಘಮಾಯಿಸುತ್ತಿರುವದಲ್ಲಾ ! ಹುಡುಗಿಯ ಹೆಸರೂ ಚನ್ನಾಗಿಯೇ ಇದೆ ನವಮಲ್ಲಿಕೆ. ಏನು, ಏನಾದರೂ.....

ಇಲ್ಲ, ಸುಮ್ಮನೆ.....

ಬರೀ ಮಾತಲ್ಲ, ನಿನಗೆ ಸಂಬಂಧಕೂಡಾ. ಏನನ್ನುವೆ ?

ಅಬ್ಬಾ ಸುಮ್ಮನಿರಿ.

ಹೌದೇಳು ! ಬುದ್ಧದೇವನ ಸಹಾಧ್ಯಾಯನು. ಪ್ರಾಪ್ತಿ ಇರಬೇಕು. ನಾನೇನು ಮಾಡಲಿ !

ಹೋಗಲಿ, ನಿಮ್ಮ ಶಿಷ್ಯನನ್ನು ತಯಾರು ಮಾಡುತ್ತಿರುವರಲ್ಲಾ !

ಹೌದು. ನೀವು ಕೈಕಸಿನಲ್ಲಿ ಪ್ರಾಕ್ಟಿಕಲ್ ಎಂದು ಪ್ರತ್ಯಕ್ಷವಾಗಿ ಮಾಡುವಿದಲ್ಲ, ಹಾಗೆಯೇ ಅವನು ಈಗ ಅಲಂಕಾರ ಶಾಸ್ತ್ರವನ್ನು ಪೂರ್ತಿ ಮಾಡಿದ್ದಾನೆ. ಕೌಮುದಿಯು ಮುಗಿಯುತ್ತ ಬಂತು. ಕಣ್ಣು ಆಡಿಸುವದಾಗಲಿ, ಹೊಸ ಹೆಣ್ಣು ಹುಡುಗಿಯರನ್ನು ಮಾತನಾಡಿಸುವದಾಗಲಿ ಕೈಲಾಗದಿದ್ದಲ್ಲಿ ಏನು ಲಾಭ. ಅನುಭವವಿಲ್ಲದ ಓದು ಏಕೆ ? ಪುಸ್ತಕದಲ್ಲಿಯೇ ಅದು ಇದ್ದಲ್ಲಿ ಒಳ್ಳೇದು.

ನಿಮ್ಮ ಓದೂ ಹಾಗೆಯೇನೋ ?

ಓ ನಮ್ಮ ಸಹಪಾಠಿಗಳಲ್ಲಿ ಗುರುವನ್ನು ಮೀರಿಸದ ಶಿಷ್ಯನು ಇದ್ದಿಲ್ಲ.

ಸರಿ, ಶಿಷ್ಯರಲ್ಲಿ ಹೆಂಗಸರೂ ಇದ್ದರೋ ?

ಅವರೇ. ಇದ್ದೇ ತೀರಬೇಕು ಸೋಡಿಸುವುದಕ್ಕೆ ಮೊದಲೇ ರುಚಿ ಸೋಸಲೆಳಿಸುವಂಥವರು. ಯಾಮಿನೀ ಪೂರ್ಣತಿಲಕಯು ಏನು ಮಾಡಿದಳು ?

ಸರಿ, ಹೋಗಲಿ ನಿಮ್ಮೊಂದಿಗೆ ವಾದಿಸಲಾರೆ. ಅಂತಹಾ ಅನಾಯಕನನ್ನು ಕಳುಹಿಸಿದಿರಿ, ಏನು ಗಲಾಟೆಯಾಗ ತ್ತದೆಯೋ ?

ಪರವಾಇಲ್ಲ. ಏನಾದರೂ, ಆ ಅನುಭವವು ಮುಂದಕ್ಕೆ ಉಪಯೋಗಕ್ಕೆ ಬರುತ್ತದೆ

ನಿಮ್ಮ ಶಿಷ್ಯನು ಹೀಗೆ ಮಾಡಿದನೆಂದು ನಿನುಗೆ ತಿಳಿದರೆ.....

ನನಿಗೇ ? ನನಿಗೇನು ? ಏನೋ ಹುಡಗ ಇನ್ನೂ ದಾರಿಯಲ್ಲಿ ಬೀಳಲಿಲ್ಲವಾದುದರಿಂದ ಹೀಗೆ ಮಾಡಿದನಾಗಲಿ, ಆದೇ ಗುರುವಾದಲ್ಲಿ..... ಎಂದು ಹೇಳಿಕೊಳ್ಳುತ್ತಾರೆ ತಿಳಿದವರು. ಆದರೂ ಯಾರೂ ಮಾತನಾಡಿಸದಿದ್ದಲ್ಲಿ ಆ ಸೂಳೆಯ ಹೆಣ್ಣು ಮಕ್ಕಳುಗಳು ಏನಾಗಬೇಕು ಹೇಳು ?

ಇನ್ನು ಅಲ್ಲಿ ನಿಂತಲ್ಲಿ ಪ್ರಯೋಜನವಿಲ್ಲವೆಂದು ಮನೆಯೊಳಕ್ಕೆ ಪ್ರವೇಶಿಸಿದೆನು. ಜ್ವಾಲಾ.

ಮೈಸೂರು ವಾರ್ತೆ

ಬರುವ ವರ್ಧಂತ್ಯುತ್ಸವಕಾಲದಲ್ಲಿ ರಾಜಧಾನಿಯಲ್ಲಿ ನಡೆಯುವ ಸ್ವದೇಶೀ ವಸ್ತುಪ್ರದರ್ಶನದ ಪ್ರಾರಂಭೋತ್ಸವವನ್ನು ಕೌನ್ಸಿಲರ್ ಶ್ರೀ ರಾಜಗೋಪಾಲಾಚಾರಿಯವರು ನೆರವೇರಿಸುವರೆಂದು ತಿಳಿಯಬಂದಿದೆ

ಮಹಾತ್ಮ ಗಾಂಧಿಯವರು ಕ್ಷೀಪ್ರದಲ್ಲಿಯೇ ಒಂದು ನಂದೀ ಬೆಟ್ಟದಲ್ಲಿ ೨ ತಿಂಗಳಕಾಲ ಇರುವರೆಂದು ತಿಳಿಯಬಂದಿದೆ. ಇವರ ಆಗಮನದ ಬಗ್ಗೆ ಬೆಂಗಳೂರು ಡಿಸ್ಟ್ರಿಕ್ಟು ಕಾಂಗ್ರೆಸು ಕಮಿಟಿಯವರು ಸ್ವಾಗತ ಏರ್ಪಾಡು ಮಾಡುತ್ತಿರುವರು.

ಶ್ರೀ ಕೂಡಲೀ ಮಠದ ಸ್ವಾಮಿಗಳು ನಿಧನರಾದುದರಿಂದ, ಅವರ ತಮ್ಮಂದಿರ ಮಕ್ಕಳು ಮಹಾದೇವ ಶಾಸ್ತ್ರಿಗಳೆಂಬುವರಿಗೆ ಈ ಮಠದ ಸ್ವಾಮಿಗಳಾಗಿ ಸನ್ಯಾಸಾಶ್ರಮವನ್ನು ಕೊಡಲಾಯಿತು.

ಅಖಿಲ ಕರ್ನಾಟಕದ ಆಯುರ್ವೇದ ಸಮ್ಮೇಳನದ ೮ ನೇ ಅಧಿವೇಶನವು ಮುಂದಿನ ತಿಂಗಳು ೬ ನೇ ತಾರೀಖಿನ ದಿವಸ ಶಿವಮೊಗ್ಗದಲ್ಲಿ ನಡೆಯುವದಾಗಿ ತಿಳಿಯಬಂದಿದೆ.

ರಾಜಧಾನಿಯ ಶ್ರೀ ಸೋಮವಂಶ ಆರ್ಯಕ್ಷತ್ರಿಯ ಸೇವಾ ಸಂಘದ ೩ ನೇ ವಾರ್ಷಿಕೋತ್ಸವವು ಮುಂದಿನ ತಿಂಗಳು ೨ ನೇ ತಾರೀಖು ಶನಿವಾರ ನಡೆಯುವುದೆಂದು ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಮೈಸೂರು ಜಿಲ್ಲಾ ಬೋರ್ಡಿನ ಮಾಟಿಂಗು ತಾ|| ೩೩ ರಲ್ಲಿ ನಡೆಯಿತು. ಮು|| ಬಿ. ಎಸ್. ಪುಟ್ಟಸ್ವಾಮಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು

ಲೀಗ್ ಕೌನ್ಸಿಲವು ಸಂಧಾನವು ನಿಷ್ಫಲವಾದ ಬಗ್ಗೆ ವಿಷಾದದ್ಯೋತಕವಾದ ನಿರ್ಣಯವನ್ನು ಪಾಸುಮಾಡಿತು. ಲೀಗ ಕೌನ್ಸಿಲಿನಲ್ಲಿ ಮಾತನಾಡುತ್ತಾ ಈಡನರು ಇಟಲಿಯ ಮೇಲೆ ಇನ್ನೂ ಹೆಚ್ಚಿನ ದಂಡಯೋಜನೆಯನ್ನು ಹೇರಲು ಬ್ರಿಟನ್ನು ಸಿದ್ಧವಿಲ್ಲವೆಂದು ಹೇಳಿದರು. ಇಟಲಿಯು ಅಬಿಸೀನಿಯಾದೊಡನೆ ಯುದ್ಧವನ್ನು ಪ್ರಾರಂಭಿಸಿರುವದು "ರಾಕ್ಷಸೀ ಮಹತ್ವಾಕಾಂಕ್ಷೆ ಅಥವಾ ದುರುದ್ದೇಶದಿಂದಲ್ಲ. ಆ ದೇಶಕ್ಕೆ ಸಂಸ್ಕೃತಿ ಸಂದೇಶವನ್ನೀಯುವದೇ ಇಟಲಿಯ ಉದ್ದೇಶ" ಎಂದು ಇಟಲಿಯ ಪ್ರತಿನಿಧಿಯ ಹೇಳಿಕೆ. ಅಬಿಸಿನಿಯ ಪ್ರತಿನಿಧಿಗಳು ಇಟಲಿಯವರ ಆಪಾದನೆಗಳನ್ನು ಖಂಡಿಸುತ್ತ, ನ್ಯಾಯಾನ್ಯಾಯವನ್ನು ಜಗತ್ತೇ ನೋಡಿಕೊಳ್ಳುವುದೆಂದೂ, ಇನ್ನಾದರೂ ರಾಷ್ಟ್ರಸಂಘವು ಸೋಮಾರಿತನ ಮಾಡದೆ ದಂಡಯೋಜನೆಯನ್ನು ಪೂರ್ತಿಮಾಡಿ ತನ್ನ ಗೌರವವನ್ನು ಕಾಯ್ದುಕೊಳ್ಳಬೇಕೆಂದೂ ಹೇಳಿದರು.

ವಾರ್ತಾತರಂಗ

ಎಲಿಯಂತೋಲ್ಮೆಕ್ ಎಂಬುವನು ಅಮೆರಿಕದ ಚಿಕಾಗೋ ಪಟ್ಟಣದ ಪ್ರಸಿದ್ಧನಾದ ಕಳ್ಳ ಆತನು ಸುಳ್ಳು ನೋಟುಗಳನ್ನು ತಯಾರಿಸಿ ಮಾರುತ್ತಿದ್ದಾಗ ಸಿಕ್ಕಿಬಿದ್ದನು. ಖೈದುಮಾಡಿದರು ಆದರೆ ಜೈಲಿಗೆ ಕರೆದುಕೊಂಡು ಹೋದರೂ, ಅವನನ್ನು ಹೊರಗೆ ನಿಲ್ಲಿಸಬೇಕಾಯಿತು. ಏಕೆಂದರೆ, ಜೈಲಿನ ಬಾಗಿಲೊಳಗೆ ಇವನ ದೇಹವು ಹೋಗದೆ ಹೋಯಿತು. ಆದುದರಿಂದ ಪ್ರತ್ಯೇಕ ಕೊಠಡಿಯೊಂದನ್ನು ಏರ್ಪಾಡು ಮಾಡಿದರು. ಅಲ್ಲಿಕೂಡ ತೊಂದರೆಬಿಂತು ಅವನು ಮಲಗಿಕೊಳ್ಳಲು ಮಾಮೂಲು ಮಂಚಗಳು ಸರಿಹೋಗಲಿಲ್ಲ ಆದದರಿಂದ ಇವನ್ಪ್ಪಾಗಿ ಒಂದು ದೊಡ್ಡ ಮಂಚವನ್ನು ತಯಾರಿಸಿದರು. ಅವನ ಶರೀರದ ತೂಕ ೮೭೨ ಪೌಂಡ್. ಇವನು ೬ ತಿಂಗಳ ಕಾಲ ಜೈಲಿನಲ್ಲಿದ್ದು ೧೫ ದಿನಗಳ ಹಿಂದೆ ಮರಣ ಹೊಂದಿದನು.

ಕೆಳಗಿನ ಜಾತಿಗಳವರನ್ನು ಉದ್ಧರಿಸಿ ಸಿಕ್ಖರನ್ನಾಗಿ ಮಾಡಲು ಅಮೃತಸರದಲ್ಲಿ ನಡೆದ ಅಖಿಲ ಸಿಕ್ಖ್ ಸಂಘಸಮಾವೇಶಕ್ಕೆ ಒಂದು ಸಂದೇಶವನ್ನು ಕಳುಹಿಸಲು ಸಿಕ್ಖ ನಾಯಕರು ಕೋರಲಾಗಿ ಡಾ|| ಕುರ್ತುಕೋಟಿ (ಶಂಕರಾಚಾರ್ಯರವರು) ನಾಸಿಕ್‌ನಿಂದ ಹೀಗೆ ಒಕ್ಕಿದಿಯವರ —"ಅಖಿಲಭಾರತ ಶಿರೋಮಣಿ ಸಿಕ್ಖ ಪ್ರಚಾರ ಸಭೆಯವರು ಅಮೃತಸರದಲ್ಲಿ ಸೇರಿ ಕೀಳ ಜಾತಿಯವರನ್ನು ಸಿಕ್ಖ ಮತಕ್ಕೆ ಸೇರಿಸಿಕೊಳ್ಳಲು ಪ್ರಯತ್ನಪಡುವರೆಂದು ಕೇಳಲು ಬಹಳ ಸಂತೋಷವಾಗುತ್ತದೆ. ನಾನು ಆ ಸಮಯದಲ್ಲಿ ಅಲ್ಲಿ ಸ್ವತಃ ಬರಲಾರದೆ ಇರಲಿಕ್ಕೆ ಬಹಳ ವ್ಯಸನಪಡುತ್ತಾ ಸಿಕ್ ನಾಯಕರನ್ನೂ ಅವರ ಮಹದುದ್ದೇಶಗಳನ್ನೂ ಅಭಿನಂದಿಸುವೆನು. ಡಿಸೆಂಬರ್ ತಿಂಗಳಲ್ಲಿ ಪ್ರಥಮತಃ ಸಿಕ್ ನಾಯಕರನ್ನು ಕಲೆತು ಈ ವಿಷಯದಲ್ಲಿ ಮಾತನಾಡಿದಾಗ ನಾನು ಅವರ ಅಭಿಪ್ರಾಯದೊಂದಿಗೆ ವಿಕೀಭವಿಸಿದೆನು. ಏಕೆಂದರೆ, ಹಿಂದುಳಿದವರು ನೂತನ ಮತಗಳನ್ನು ಸೇರಲೆಳಿಸಿದಲ್ಲಿ ಅದ ಆ ಮತೀಯರ ಪೂರ್ವೀಕರ ಮತಗಳಿಗೂ, ಅವರ ಸ್ವಾಭಾವಿಕ ಧರ್ಮಗಳಿಗೂ ಅವರ ವಿಜ್ಞಾನಕ್ಕೂ ವಿರುದ್ಧವಾಗದೆ ಇರುವದಾಗಿರಬೆಕು. ಸಿಕ್ಖ ಮತವನ್ನು ಅವಲಂಬಿಸುವದರಲ್ಲಿ ಅವರು ಹಿಂದೂ ಮತವನ್ನಾಗಲಿ ಸಂಘವನ್ನಾಗಲಿ ಬಿಡದೆ ಅಸ್ಪೃಶ್ಯತಾದೋಷರಹಿತರಾಗುವರು.

ಬ್ಲೊಂಬಾಯಿ ಪಾರ್ಶ್ವದ ಉತ್ತಿಯಾ ಎಂಬ ಗ್ರಾಮದಲ್ಲಿ ಒಂದು ಭಾರೀ ಬೆಂಕಿಯು ಅನಾಹುತ ಉಂಟಾಗಿ ಗ್ರಾಮವು ಸಂಪೂರ್ಣವಾಗಿ ಸುಟ್ಟುಹೋಯಿತೆಂದು ತಿಳಿಯಬಂದಿದೆ.

ಇದು ನಾಗರೀಕತೆ

೨೦ ನೆಯ ಶತಾಬ್ದವು ನಾಗರಿಕತೆಯಲ್ಲಿ ಪ್ರಪೇಚವನ್ನು ಬಹಳ ದೂರದವರೆಗೂ ತೆಗೆದುಕೊಂಡು ಹೋಗಿದೆಯೆಂದು ಎಲ್ಲರೂ ಹೇಳುತ್ತಾರೆ. ಆದರೆ ಈ ಶತಾಬ್ದದಲ್ಲಿ ಶಾಸ್ತ್ರಜ್ಞರು ಕಂಡುಹಿಡಿದ ಮುಖ್ಯವಾದ ಮರಣವಸ್ತುವು ಯಾವುದೆಂದರೆ ಗ್ಯಾಸು ಬಾಂಬುಗಳು. ಈ ಗ್ಯಾಸು ಬಾಂಬುಗಳ ಪ್ರಯೋಗದಿಂದಲೇ ಮುಸುಲಿನಿ ಇತಿಯೋಪಿಯರನ್ನು ಎಕ್ಕುಗಳಂತೆ ಸಾಯಿಸುತ್ತಿದ್ದಾನೆ.

ಈ ಗ್ಯಾಸು ಬಾಂಬುಗಳ ನಷ್ಟದಿಂದ ಹೇಗೆ ತಪ್ಪಿಸಿಕೊಳ್ಳಬೇಕೋ ಕಲಿಸಲು ಇಂಗ್ಲೆಂಡಿನಲ್ಲಿ ಸ್ಕೂಲೊಂದನ್ನು ಇಟ್ಟಿರುವರು. ಈ ಸ್ಕೂಲಿಗೆ ಸುಮಾರು ೧೫ ಲಕ್ಷ ರೂಪಾಯಿಗಳನ್ನು ವ್ಯಯಮಾಡುತ್ತಿರುವರು.

ಇದು ನಾಗರಿಕತೆ, ಮರಣ ಯಂತ್ರಗಳನ್ನು ನಿರ್ಮಾಣಮಾಡುವಿಕೆ, ಅವುಗಳಿಂದ ರಕ್ಷಣೆ ಮಾಡಿಕೊಳ್ಳುವ ಕಲಿಯುವಿಕೆ [ಯು ವಾ

ಪಾಪ

ಅಹಮ್ಮದಾಬಾದಿನಲ್ಲಿ ಒಬ್ಬ ಕೋಟೀಶ್ವರನಿದ್ದಾನೆ ಅತನಿಗೆ ಸುತಾನವಿಲ್ಲ ಆದಕ್ಕಾಗಿ ಅತನು ಒಂದು ಯಜ್ಞವನ್ನು ಮಾಡಿದ ಆ ಯಜ್ಞಕ್ಕೆ ಬಂಧುಗಳೆಲ್ಲರನ್ನೂ ಕರೆದ ಎಲ್ಲರೂ ಬಂದರು ಆ ಮಣ ಮಿಠಾಯಿ ತಯಾರು ಮಾಡಿಸಿದ ಬಂಧುಗಳ ಪಲಹಾರಕ್ಕೆ ಯಾರೂ ಆ ಮಿಠಾಯಿಯನ್ನು ತಿನ್ನಲಿಲ್ಲ ಏಕೆ ತಿನ್ನಲಿಲ್ಲವೆಂದು ಕೇಳಿದ, ನಿನಗೆ ಪಕ್ಕಳಿಲ್ಲ ಹುಟ್ಟುವರೆಂಬ ನಂಬಿಕೆಯಿಲ್ಲ ಅದಕ್ಕಾಗಿ ನಿನ್ನ ತರುವಾಯ ನಿನ್ನ ಆಸ್ತಿಯನ್ನು ಯಾರಿಗೆ ಕೊಡುವೆಯೋ ತಿಳಿಸುವವರೆಗೂ ನಾವು ಮಿಠಾಯಿ ತಿನ್ನುವದಿಲ್ಲವೆಂದು ಮೆದರು ಕೋಟೀಶ್ವರನಿಗೆ ಕೋಪಬಂತು ಆ ಮರಣ ಮಿಠಾಯಿಯನ್ನೂ ಗೋವುಗಳಿಗೆ ತಿನ್ನಿಸಿದ ಹಿಂದೂ ದೇಶವು ಪುಣ್ಯಭೂಮಿ ಎನ್ನುವರು ಎಲ್ಲಿ ಎಲ್ಲಾ ವೇದಾಂತ ಮತವೂ ಆಶಯಗಳೂ ಸಂಘದಲ್ಲಿ ಜೀರ್ಣಿಸಿವೆ ಎನ್ನುವರು ಮೇಲ್ಕಂಡ ವಿಷಯವನ್ನು ಅರಿತಸಂತರ ಈ ದೇಶವು ಎಷ್ಟು ನೀಚಸ್ಥಿತಿಯಲ್ಲಿರುವದೋ ಬುದ್ಧಿವಂತರು ಊಹಿಸಬಹುದು.

ಈಸ್ಟರ್ ಹಬ್ಬದ ಕಾಲಗಳಲ್ಲಿ ಹಿಂದೆ ಎಂದೂ ಆಗದಷ್ಟು ಛಳಿಯೂ ಈ ವರ್ಷ ಇಂಗ್ಲೆಂಡಿನಲ್ಲಿ ಪ್ರಾಪ್ತವಾಗಿದ್ದಿತೆಂದೂ, ಅನೇಕ ಆಟಪಾಟಗಳೂ, ಏನೋ ದಾದಿಗಳೂ ಮಳೆಯು ಮತ್ತು ಮಂಜಿನ ದೆಸೆಯಿಂದ ನಿಲ್ಲಿಸಿಬಿಡಬೇಯಿತೆಂದಬ ಪ್ರಕಟವಾಗಿದೆ.

ಇಟಲಿ ಸರ್ವಾಧಿಕಾರಿಯಾದ ಸೀನಾರ್ ಮುಸೋಲಿಯವರ ಒಂದು ಭಾರಿ ಕಂಚಿನ ಪ್ರತಿಮೆಯು ರೋಮ್ ನಗರದಲ್ಲಿ ತಯಾರಾಗುತ್ತಿದೆ. ಇದು ೪೧ ಅಡಿ ಎತ್ತರವಿದೆ. ಪ್ರಪಂಚದಲ್ಲಿರುವ ಎಲ್ಲಾ ಪ್ರತಿಮೆಗಳಿಗಿಂತಲೂ ಇದು ಭಾರಿಯಾದುದೆಂದು ಹೇಳಲಾಗಿದೆ

ಸತ್ಯವಾದಿ

ಹೊಸ ವೈಸ್ರಾಯರು

ಹೊಸ ವೈಸ್ರಾಯರಾದ ಲಿನ್‌ಲಿತ್‌ಗೋ ಪ್ರಭುಗಳು ಸಾಮಾನ್ಯರಂತೆ ಕಾಣಬರುವದಿಲ್ಲ. ಇಲ್ಲಿಗೆ ಬರುವದಕ್ಕೆ ಮುಂಚೆಯೇ ಒಂದು ಪ್ಲಾನನ್ನು ಹಾಕಿಕೊಂಡು ಬಂದಿರುವಂತೆ ಕಾಣುತ್ತದೆ. ಅವರು ಮುಂಬೈಯಲ್ಲಿ ಕಾಲಿಟ್ಟ ಮೊದಲು ರೈತರನ್ನು ಕುರಿತೇ ಮಾತನಾಡುತ್ತಿರುವರು. ಇವು ಮೇಲಿನ ಮಾತುಗಳಲ್ಲ. ಒಳಗಿನಿಂದ ಬಂಪವುಗಳು. ರೈತನು ಉತ್ತು ಬೀವಿಸುವವೆಂದರೆ ಹೊಲವಿಲ್ಲ. ಋಣಗ್ರಸ್ತನಾಗಿ ಋಣದ ಬಾಧೆಯಿಂದ ನರಳುತ್ತಿದ್ದಾನೆ. ಉಳಲು ಸದವಕಾಶಗಳಿಲ್ಲ. ಪಶುಗಳು ದಿನೇ ದಿನೇ ಕ್ಷೀಣಿಸುತ್ತಲಿವೆ. ಹೆಂಡರು ಮಕ್ಕಳು ತಿಂಡಿಯಿಲ್ಲದೆ ಉರಿದು ಹೋಗುತ್ತಿದ್ದಾರೆ. ಅದರ ಮೇಲೆ ರೋಗಗಳ ಬಾಧೆ ಬೆಟ್ಟಿಲ್ಲ. ಜೀವನವೆಂದರೆ ವಿರಕ್ತನಾಗಿ, ಸಾವಿಗಿಂತ ಬೇರೆ ಉಪಾಯವಿಲ್ಲವೆಂದು ಅಂದುಕೊಳ್ಳುತ್ತಿರುವನು. ಇಂತಹ ದುರವಸ್ಥೆಯ ಕಾಲದಲ್ಲಿ ದೇವರು ಲಿನ್‌ಲಿತ್‌ಗೊ ಪ್ರಭುವನ್ನು ನಮ್ಮಲ್ಲಿಗೆ ಕಳುಹಿಸಿರುವನು. ಇವರಿಗೆ ನಮ್ಮ ರೈತನ ದುಸ್ಥಿತಿಯೇ ಸದಾ ಬಾಧಿಸುತ್ತಿರುವಂತಿದೆ ಇವರ ಹೃದಯಕೋಶವನ್ನು ಜೇಧಿಸುತ್ತಿದೆ. ರೈತನಿಗೆ ಮುಖ್ಯಾಧಾರವು ಪಶುವು. ಪಶುಗಳ ದುಸ್ಥಿತಿಯನ್ನು ಬೇರೆ ಹೇಳಬೇಕಾಗಿರುವದಿಲ್ಲ. ಪಶುಗಳಿಲ್ಲದೆ ದನಸವೂ ಇಲ್ಲ, ಹಾಲು, ಮೊಸರು, ತುಪ್ಪಗಳು ಇಲ್ಲ. ಕೇವಲ ಕೃಷಿಯಮೇಲೆಯೇ ಆಧಾರಪಡಬೇಕಾದಾಗ ಇವುಗಳಿಲ್ಲದೆ ಜೀವಿಸುವದೆಂತು? ನಮ್ಮ ಹೊಸ ವೈಸ್ರಾಯರವರು ಮುಖ್ಯವಾಗಿ ಈ ವಿಷಯವನ್ನು ಹಿಡಿದಿರವರು. ಪ್ರತಿ ಗ್ರಾಮವನ್ನೂ ಉದ್ಧಾರಮಾಡಬೇಕೆಂಬ ಸಂಕಲ್ಪವನ್ನು ಮಾಡಿರುವರು. ಗ್ರಾಮೋದ್ಧಾರವೆಂದರೆ ರೈತನ ಪ್ರಾಣಸಂರಕ್ಷಣೆ, ಗೋಸಂರಕ್ಷಣ ಸಂಘಗಳು, ಪ್ರತ್ಯೇಕವಾಗಿ ಇರಬೇಕಾಗಿರುವದಿಲ್ಲ. ವೈಸ್ರಾಯರವರ ಘನಾನಾದಿಂದ ಎಲ್ಲರೂ ಎಚ್ಚರಗೊಳ್ಳುವರು. ಇನ್ನು ಮುಂದೆ ನಮ್ಮ ಇಂಡಿಯಾ ಸರ್ಕಾರವು ಹೊಸ ಮಾರ್ಗದಲ್ಲಿ ನಡೆಯುವದು. ವೈಸ್ರಾಯರವರ ಆಜ್ಞಾನುಸಾರವಾಗಿ ಸರ್ಕಾರವು ನಡೆಯಲೇಬೇಕಾಗುತ್ತದೆ. ಚತುಸ್ಸಾಗರಪರ್ಯಂತಂ ಗೋಬ್ರಾಹ್ಮಣೇಭ್ಯಃ ಶುಭಂಭವತು.

ಇನ್ನು ಮುಂದೆ ಯೂರೋಪಿನಲ್ಲಿ ಚಳಿಯು ಹೆಚ್ಚುತ್ತಾ ಸಹಿಸಲಾರದಷ್ಟು ಆಗುವದಂತೆ. ಕಾರಣ "ಗಲ್ಫ್‌ಸ್ಟ್ರೀಂ" ಉಷ್ಣೋದಕ ಪ್ರವಾಹದ ಉಷ್ಣವು ದಿನೇ ದಿನೇ ಕಡಿಮೆ ಆಗುತ್ತಿರುವದೇ ಆಗಿರುತ್ತದೆ.

ಸ್ತ್ರೀ ಸೈನ್ಯ

ರಷ್ಯಾ ದೇಶದಲ್ಲಿ ಒಹಳ ಅದ್ಭುತವಾದ ಬದಲಾವಣೆಗಳು ಆಗುತ್ತಲಿವೆ. ಎರಡು ವರ್ಷಗಳ ಹಿಂದೆ ಒಂದು ಕಾನೂನು ಜಾರಿಗೆ ಬಂತು. ಅದರಂತೆ ಸ್ತ್ರೀಯರು ಸೈನ್ಯದಲ್ಲಿಯೂ ನಾವಿಕ ದಳದಲ್ಲಿಯೂ ಸೇರಬಹುದು. ಈಗ ಸ್ತ್ರೀ ಸೈನ್ಯವು ಒಂದು ತಯಾರಾಗಿದೆ ಇವರು ಯುದ್ಧವ ವಿಷಯದಲ್ಲಿಯೂ ಪುರುಷರ ಸೈನ್ಯಕ್ಕೆ ಕಡಿಮೆಯಾಗಿಲ್ಲ. ಈ ವಿಷಯವನ್ನು ನಾನು ಸ್ನೇಹಿತನಾದ ಒಬ್ಬ ಬ್ರಾಹ್ಮಣನೊಂದಿಗೆ ಹೇಳಿದೆ. ಓಹೋ! ಇದೆಲ್ಲಾ ನಮ್ಮ ವೇದದಲ್ಲಿದೆ ನೀವು ಪುರಾಣಗಳನ್ನು ಓದಲಿಲ್ಲವೆ? ರಾಣೀ ಪ್ರವಿಣಾ ಳೆಯ ಸಂಗತಿಯನ್ನು ನೀವು ಅರಿಯರೆ? ಅಷ್ಟರವರಿಗೂ ಏಕೆ? ಸ್ತ್ರೀ ಮಳೆಯಾಳದ ವಿಷಯವನ್ನು ಕೇಳಲಿಲ್ಲವೆ? ಪಾಶ್ಚಾತ್ಯರು ಈಗೆಲ್ಲಾ ನಮ್ಮ ಪದ್ಧತಿಗಳನ್ನೇ ಅನುಸರಿಸುತ್ತಿರುವದು. ಹೀಗೆ ಹೇಳುತ್ತಾ ಅರ್ಧ ಸೇರು ಮದ್ಯಾಸು ಪುಡಿಯನ್ನು ತನ್ನ ಬಾಯಿಗೆ ಸೇರಿಸಿದನು. ಯ. ವಾ

ಸತ್ತು ಬದುಕಿದವನು

ನಾಡಿ ಆಡದಿಲ್ಲ ಹೃದಯವು ನಿಶ್ಚಲವಾಗಿದೆ. ೧ ಗಜ ಆಳದ ಗುಂಡಿಯಲ್ಲಿ ಹೂತಿಟ್ಟರು. ಕಣ್ಣುಗಳನ್ನು ಮುಚ್ಚಿ ಕಟ್ಟಿದರು.

ಹೊರಗಿನಿಂದ ಯಾವ ಪದಾರ್ಥವನ್ನಾಗಲಿ ಮುಂಡೆ ಹಿಡಿದರು ಬಣ್ಣ, ಆಕಾರ, ಪದಾರ್ಥದ ಹೆಸರು ಹೇಳುತ್ತಾನೆ ಹಲಿಗೆಯ ಮೇಲೆ ಯಾವ ಭಾಷೆಯಲ್ಲಾದರೂ ಬರೆದರು ಹೀಗೆ ಬರೆದಿರುವದೆಂದು ಹೇಳುವನು

ಇವು ವಿರಳ್ತು ನಿವಾಸಿಯಾದ ಅಪ್ಪಾಲು ಎಂಬವ ಯೋಗಿಯು ಮಾಡುವ ಅದ್ಭುತ ಕಾರ್ಯಗಳು ಹೇಗೆ ಮಾಡುವಿಯ್ಯಾ ಅಂದು ಕೇಳಿದರೆ— ಕೇವಲ ಯೋಗಸಾಧನೆ ಅನ್ನುತ್ತಾನೆ. ಬೇರೆ ಬೇರೆ ಸ್ಥಳಗಳಲ್ಲಿರಬಲ್ಲಂಥ ಬೇರೆ ಬೇರೆ ೫ ಪದಾರ್ಥಗಳನ್ನು ೫ ಬಾಣಗಳಿಂದ ಒಂದೇ ಬಾರಿ ಗುರಿಯಿಟ್ಟು ಹೊಡೆಯಬಲ್ಲನು ಇಷ್ಟೇ ಅಲ್ಲ ಈ ಮಹಾನುಭಾವನು ಸ್ವಲ್ಪ ದಿವಸಗಳಲ್ಲಿಯೇ ಯೂರೋಪಿಗೆ ಹೋಗಲಿರುವನು. ತನ್ನ ಅದ್ಭುತ ಶಕ್ತಿಗಳನ್ನು ಯೂರೋಪಿಯರ ಮುಂದೆ ಪ್ರದರ್ಶಿಸಲು ನಿಶ್ಚಯಿಸಿರುವನು

ದೌರ್ಜನ್ಯ

ರಾಜಪುಟಾನಾದ ಜಲ್ವಾರಾದಲ್ಲಿ ಕೆಲವರು ಹರಿಜನರು ಸಂಕರ್ಷಣೆ ಮಾಡಿಕೊಳ್ಳುತ್ತಿದ್ದರು ಹಿಟ್ಟಿನ ಪದಾರ್ಥಗಳೂ ಪಲ್ಯಗಳೂ ತುಪ್ಪದಲ್ಲಿ ಪಕ್ವ ಮಾಡಲ್ಪಡುತ್ತಿದ್ದವು ಆ ಊರಿನ ಕೆಲವು ಮಂದಿ ಸನಾತನರು ಅಲ್ಲಿಗೆ ಹೋಗಿ "ನೀವು ತುಪ್ಪದಲ್ಲಿ ಮಾಡಿದ ಪದಾರ್ಥಗಳನ್ನು ತಿನ್ನಕೂಡದು" ಎನ್ನಲಿಕ್ಕೆ ಆ ಮಾಡಿದ್ದ ಪದಾರ್ಥಗಳನ್ನು ಭೂಮಿಯಪಾಲು ಮಾಡಿದರಂತೆ. ಹರಿಜನರು ಏನು ಮಾತನಾಡದೆ ಪೊಲೀಸಿಗೆ ರಿಪೋರ್ಟು ಮಾಡಿಯುವರು

ಸನಾತನರ ಈ ಕಾರ್ಯವು ಸನಾತನರಾದವರೆಂದು ಹೇಳಿಕೊಳ್ಳುವವರಿಗೆ ಯೋಗ್ಯವಾದುದಲ್ಲ

ಗ್ರಾಜುಯೇಟು ಚಮ್ಮಾರ!

ಪಂಜಾಬ್ ವಿಶ್ವವಿದ್ಯಾನಿಲಯದ ಒಬ್ಬ ಗ್ರಾಜುಯೇಟ್, ಪಗವೀಧರನು ಜಲಂಧರ್ ಪಟ್ಟಣದಲ್ಲಿ ಚಮ್ಮಾರ ಕೆಲಸವನ್ನು ಪ್ರಾರಂಭಿಸಿರುತ್ತಾನೆ! ಬೇರೆ ಒಂದು ಅಂಗಡಿಯನ್ನು ಇಟ್ಟಿಲ್ಲದಿದ್ದರೂ, ಪ್ರತಿ ಅಂಗಡಿಗೂ ಹೋಗಿ ಕೆಲಸವನ್ನೂ ಮಾಡುತ್ತಾನೆ. ಇದೀಗ ನಿರುದ್ಯೋಗದ ವಿಷಮಪರಿಣಾಮ. ಆದರೆ ಶಿಫಾರಸ್ ಇರುವವರಿಗೆ ಏನೂ ತಾಪತ್ರಯವಿಲ್ಲ !! ಅವರಿಗೋಸ್ಕರವೇ ಹುದ್ದೆಗಳು ಕಾದಿರುತ್ತವೆ !! ದೊಡ್ಡ ಮನುಷ್ಯರ ಮಕ್ಕಳೂ ದೊಡ್ಡ ಮನುಷ್ಯರೇ ಆಗಬೇಕಷ್ಟೆ!

* *

ಬದುಕಿರುವವನಿಗೆ ಸತ್ತವನ ಕಣ್ಣು

ಆಡೆಸ್ಸಾ ಕಣ್ಣಾಸ್ಪತ್ರೆಯ ಪ್ರೊಫೆಸರ್ ವಿ. ಪಿಲೇಟರ್ ಎಂಬುವರು ಕುರುಡರು ಸ್ವಲ್ಪ ಸ್ವಲ್ಪ ನೋಡುವಂತೆ ಮಾಡಿರುತ್ತಾರೆ! ಸತ್ತಿರುವ ಶವಗಳ ಕಣ್ಣುಗಳನ್ನು ಕಿತ್ತು ಈ ಕುರುಡರ ಕಣ್ಣುಗಳಿಗೆ ಜೋಡಿಸುವುದೇ ಈ ಮಾಗ!! ಅವರು ಪರೀಕ್ಷಾರ್ಥವಾಗಿ ನಡೆಸಿದ ನೂರಾರು ಇತರದ ಆಪರೇಷನ್‌ಗಳೆಲ್ಲವೂ ಸಫಲವಾಗಿ ಕುರುಡರು ಈಗ ಓದಬಲ್ಲರಂತೆ! ಇದೀಗ ಕಲಿಯುಗದ ಮಹಿಮೆ!

o o

೧೫೦ ವರ್ಷದ ಹಣ್ಣು ಮುದುಕನಿಗೆ ಮದುವೆಯಂತೆ ಹುಚ್ಚು!

ಅಲೆಗ್ಜಾಂಡ್ರಿಯಾ ಪಟ್ಟಣದ ಒಬ್ಬ ೧೫೦ ವರ್ಷ ವಯಸ್ಸಿನವರನು ೨೫ ವರ್ಷದ ಹುಡುಗಿಯನ್ನು ಮದುವೆಯಾಗಲಿರುವನು. ಅವನಿಗೆ ೧೮ ಸಾರಿ ಮದುವೆಯಾಗಿದೆ, ಅವನ ಮೊದಲಿನ ಹೆಂಡತಿಯರೆಲ್ಲರೂ ಪರಲೋಕದಲ್ಲಿದ್ದಾರೆ! ಅವನ ಮೊಮ್ಮಕ್ಕಳು ಇವನ ಮದುವೆಗೆ ಒಪ್ಪುವುದಿಲ್ಲ. ವರನಿಗೂ, ವಧುವಿಗೂ ವಯಸ್ಸಿನಲ್ಲಿ ೧೦೫ ವರುಷ ವ್ಯತ್ಯಾಸವಿದೆ ಎಂಬುದೇ ಅವರ ಆಕ್ಷೇಪಣೆ. ಸರ್ವಿಸ್ಸಿನಲ್ಲಿರುವ ನಮ್ಮ ಮುದುಕರೇನೂ ಕಮ್ಮಿಯಿಲ್ಲ? ಇವರಲ್ಲಿ ಕೆಲವರಿಗೆ ೬೦ ಅಥವಾ ೭೦ ವರ್ಷಗಳಾಗಿದೆಯೆಂದು ಎಂಥಹ ಕುರುಡನಾದರೂ ಹೇಳಬಲ್ಲನು. ಆದರೆ ಸರ್ವಿಸ್ಸಿನ ಪ್ರಕಾರ ಅವರು ಇನ್ನೂ ಪ್ರಾಯದವರಾಗಿರುತ್ತಾರೆ ರಿಟೈರಾಗುವ ಸಮಯಕ್ಕೆ ಶತವರ್ಷಗಳ ಪೂರ್ವಾರ್ಜಿಯನ್ನು ತುಂಬಬೇಡವೇ?!

o o

"ಬಹಳ ಸ್ವಲ್ಪ ಪೆಟ್ರೋಲಿನಿಂದ ಬಹಳ ದೂರ ಪ್ರಯಾಣ ಮಾಡಬಹುದಾದ ವಿಮಾನಗಳನ್ನು ಸ್ಟೋರು ಎಂಬಾತನು ಕಂಡುಹಿಡಿದಿರುವನು.

ವರ್ತಮಾನಗಳು

೫೦ ನೆಯ ದೇಶೀಯ ಮಹಾಜನ ಸಭೆಯನ್ನು ಬರುವ ವರ್ಷ ಪೂನಾದಲ್ಲಿ ನಡಿಸಲು ನಿಶ್ಚಯಿಸಿರುವರು.

ಇನ್ನು ಮುಂದೆ ಗಂಡಹೆಂಡಿರ ಆರೋಗ್ಯವನ್ನು ಹಿಡಿದ, ಅವರ ಆದಾಯವನ್ನು ಅನುಸರಿಸಿ ಅವರು ಮಕ್ಕಳನ್ನು ಪಡೆಯಬಹುದು ಎಂಬ ಲೈಸೆನ್ಸ್ ಕೊಡುವಂತೆಯೂರೋಪಿನಲ್ಲಿ. ಆದಾಯವಿಲ್ಲದ ಆರೋಗ್ಯವಿಲ್ಲದ ಗಂಡಹೆಂಡರ ಮಕ್ಕಳನ್ನು ಪಡೆಯಲು ಅಧಿಕಾರವುಳ್ಳವರಾಗಿರುವದಿಲ್ಲ

ಇಟಲಿ ದೇಶದ ಆರ್ಥಿಕ ದುಸ್ಥಿತಿಯಿಂದ ಅವರ ಕಣ್ಣುಗಳನ್ನು ಮುಚ್ಚಲು ಮುಸೋಲಿನಿ ಇತಿಯೋಪಿಯಾ ಯುದ್ಧವನ್ನು ಪ್ರಾರಂಭಿಸಿದನೆಂದು ತಿಳಿಯಬರುತ್ತದೆ ಯುದ್ಧದ ವಿಷಯವು ಹೇಗಿದ್ದರೂ ಯುದ್ಧವು ಮುಗಿಯುವ ವೇಳೆಗೆ ಇಟಲಿಯು ದಿವಾಳಿಯಾಗುವಂತೆದೆ ಆದರೆ ಯಾರೂ ಈ ವಿಷಯವನ್ನು ಹೊರಗೆ ಹೊರಪಡಿಸುತ್ತಿಲ್ಲ, ಹೀಗೆಂದು ಪತ್ರಿಕಾ ವಿಲೇಖಕರು ಅಭಿಪ್ರಾಯಪಡುವರು

ಇಂಗ್ಲೆಂಡಿಗೆ ಸೇರಿದ ಬರ್ಮಿಂಘಾಮ್‌ನಲ್ಲಿ ಹಾವ್ಲೋವ್ಡ್ಡಿಂಗ್ ಎಂಬ ನರ್ಸನ್ನು ಗಲ್ಲಿಗೆ ಹಾಕಿದರು. ಈಕೆ ಮಾಡಿದ ತಪ್ಪೇನೆಂದರೆ—ನರ್ಸಿಂಗ್ ಹೋಮಿನಲ್ಲಿ ಮಿಸ್ ಏಡಾಬಗೆಲೇ ಎಂಬಾಕೆಯನ್ನು ಕೊಂದ ಳು. ಈ ಶತಾಬ್ದದಲ್ಲಿ ಇಂಗ್ಲೆಂಡಿನಲ್ಲಿ ಗಲ್ಲಿಗೆ ಹಾಕಲ್ಪಟ್ಟ ಸ್ತ್ರೀಯರಲ್ಲಿ ಈಕೆಯು ಎಂಟನೆಯವಳು

ದೆಹಲಿ ಅಸೆಂಬ್ಲಿಯಲ್ಲಿ ಅಕ್ಕಿಯ ಮೇಲಿನ ಸಂಕವನ್ನು ಕುರಿತು ಚರ್ಚೆ ನಡೆಸಿದಾಗ ಅಕ್ಕಿಯ ಮೇಲೆ ಮಣಕ್ಕೆ ಒಂದು ರೂಪಾಯಿಯಂತೆಯೂ ಭತ್ತದ ಮೇಲೆ ಮಣಕ್ಕೆ ಎಂಟು ಆಣೆಯಂತೆಯೂ ಸಂಕವನ್ನು ವಿಧಿಸಬೇಕೆಂಬ ವಿಚಾರವು ೬೮ ಓಟುಗಳಿಂದ ಅಪೋದಿಸಲ್ಪಟ್ಟಿತು, ಇದಕ್ಕೆ ವಿರೋಧವಾಗಿ ೪೪ ಮಂದಿ.

ಪಂಡಿತ ಜವಹರಲಾಲರವರು ತಮ್ಮ ಸ್ವೀಯ ಚರಿತ್ರೆಯನ್ನು ಆಂಗ್ಲಭಾಷೆಯಲ್ಲಿ ಈ ತಿಂಗಳಿನ ಕೊನೆಯಲ್ಲಿ ಹೊರಪಡಿಸುವರು, ಇದರಲ್ಲಿ ಸಿಷ್ಕೃಪಟವಾಗಿಯೂ ತನ್ನ ಸ್ನೇಹಿತರನ್ನು ಕುರಿತ ಚರ್ಚೆಗಳೂ ವಿಮರ್ಶೆಗಳೂ ತಿಳಿಸಲ್ಪಟ್ಟಿರುವಂತೆ

ತಾ|| ೨೧-೩-೩೬ ರಲ್ಲಿ ಅಫಘಣ ಸರ್ಕಾರದವರು ತಮ್ಮ ದೇಶಗಳಲ್ಲಿಯ ಎಲ್ಲಾ ಟೋಲ್‌ಗೇಟುಗಳನ್ನು ತೆಗೆದುಹಾಕಿರುವಂತೆ ಪ್ರಕಟಿಸಿರುವರು.

ಮದರಾಸಿನಲ್ಲಿ ತಾ|| ೧೪-೪-೩೬ ರಲ್ಲಿ ವಾಷಂಮೆಕ್ಕಪೇಟೆ ಮತ್ತು ಬೇಸಿನ್ ಬ್ರಿಡ್ಜ್ ಸ್ಟೇಷನ್ನುಗಳ ನಡುವೆ ೩೦೦ ಅಡಿಗಳ ಟೆಲಿಫೋನ್ ತಂತಿಯನ್ನು ಯಾರೋ ಅಪಹರಿಸಿರುವರು.

ಕಲ್ಕತ್ತೆಯಿಂದ ಹೊರಡುವ ಪ್ರಸಿದ್ಧ ಅಮೃತಬಜಾರ್ ಪತ್ರಿಕಾ ಸಂಪಾದಕರಾದ ಶ್ರೀ ವಿನೋದ ಕಾಂತಿಘೋಷರವರು ತಾ|| ೩-೪-೩೬ ರಲ್ಲಿ ತಮ್ಮ ೪೨ ನೆಯ ವಯಸ್ಸಿನಲ್ಲಿ ಪರಲೋಕವಾಸಿಗಳಾದರು. ಪತ್ರಿಕಾಪ್ರಪಂಚಕ್ಕೆ ಇವರು ಅಪಾರ ಸೇವೆಯನ್ನು ಮಾಡಿದವರು.

ವಿವಿಧ ವಿಷಯಗಳು

ಮಹಮದ್ದಾಲಿಯವರ ಪತ್ನಿಯವರು ಸಂಯುಕ್ತ ಪ್ರಾಂತ್ಯದ ಜುನಾವಣೆಯಲ್ಲಿ ಮುರಾದಾಬಾದ್ ಸ್ತ್ರೀಯ ಸ್ಥಾನದಿಂದ ನಿಲ್ಲುವರಾಗಿ ತಿಳಿಯಬಂದಿದೆ.

ಪಂಡಿತ್‌ಜವಹರಲಾಲರು ಕಾಂಗ್ರೆಸ್ಸಿನ ಹೊಸ ಕಾರ್ಯಕಾರೀ ಮಂಡಲಿಯನ್ನು ಏರ್ಪಡಿಸಿಕೊಂಡರು ಇದರಲ್ಲಿ ಕರ್ನಾಟಕದ ಯಾರೊಬ್ಬರೂ ಇಲ್ಲದಿರುವುದು ವಿಷಾದಕರವು.

ಮದರಾಸಿನಲ್ಲಿ ನಡೆದ ಎಸ್. ಎಸ್. ಎಲ್.ಸಿ. ಪರೀಕ್ಷೆಗೆ ಪರೀಕ್ಷೆ ಪತ್ರಗಳು ಇಂಗ್ಲೆಂಡಿನಲ್ಲಿ ಮುದ್ರಿತವಾಗಿ ಒಂದರಂ ಹೆಗೋ ಪರೀಕ್ಷೆಗೆ ಮುಂಚೆಯೇ ಅವು ಹೊರಪಡ್ದವು. ಈ ಸಂದರ್ಭದಲ್ಲಿ ೭ ಮಂದಿಯನ್ನು ಅರೆಸ್ಟು ಮಾಡಿರುವರು.

ಫಶೇಗ್ರೇ ಗ್ರಾಮದಲ್ಲಿ ಒಬ್ಬ ಗುಮಾಸ್ತೆಯ ಹೆಂಡತಿಯು ಆತನು ಸತ್ತಾಗ ಸಹಗಮನ ಮಾಡಲು ಯತ್ನಿಸಿದಳು ಆದರೆ ಪೋಲೀಸಿನವರು ಹಾಗೆ ಮಾಡಲು ಅವಕಾಶ ಕೊಡಲಿಲ್ಲ. ೨೦ ನೆಯ ಶತಮಾನದಲ್ಲಿಯೂ ಸಹಗಮನ ಮಾಡಲು ಇಚ್ಛಿಸುವ ಸ್ತ್ರೀಯರಿರುವದು ಆಶ್ಚರ್ಯ.

ಪಾಶ್ಚಾತ್ಯ ದೇಶದಲ್ಲಿ ದಿಗಂಬರತ್ವದ ಮೇಲೆ ವ್ಯಾಮೋಹವು ಹೆಚ್ಚು. ಅಲ್ಲಿ ಈ ಪಂಗದದವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ. ಈಚೆಗೆ ಅಮೇರಿಕದಲ್ಲಿ ದಿಗಂಬರರಾಗಿಯೇ ಮದುವೆಯಾದರ. ಪುರೋಹಿತನು ಮಾತ್ರ ಒಪ್ಪಿಗೆಯನ್ನು ಧರಿಸಿದ್ದನ. ಈ ಮದುವೆಯು ಜನಂಲ್ಲಿ ಬಹಳ ಕೋಲಾಹಲವನ್ನುಂಟುಮಾಡಿರುತ್ತದೆ.

ಪಂಜಾಬಿಗೆ ಸೇರಿದ ಫಿರೋಜಪೂರ್ ಜಿಲ್ಲೆಯಲ್ಲಿ ಒಬ್ಬ ಕಳ್ಳನು 6 ವರ್ಷಗಳಿಂದ ಸಿಗದೆ ಪೋಲೀಸಿನವರ ಕಣ್ಣಿಗೆ ಧೂಳನ್ನು ಎರಚುತ್ತಿದ್ದನು. ಅವನನ್ನು ಕೆಲವು ದಿವಸಗಳ ಹಿಂದೆ ಬಿಕನೀರ್ ಸಂಸ್ಥಾನದಲ್ಲಿ ಹಿಡಿದರು. ಬೊಂದು ಸಿಕ್ ಗುರುದ್ವಾರದಲ್ಲಿ ವೈಶಾಖ ಹಬ್ಬದ ಸಂದರ್ಭದಲ್ಲಿ ಸಾಧುವೇಷವನ್ನು ಹಾಕಿಕೊಂಡು ಕೆಲವರು ಶಿಷ್ಯರಿಗೆ ಬೋಧಿಸುತ್ತಿದ್ದನು. ಶಿಷ್ಯರ ವೇಷಗಳನ್ನು ಹಾಕಿಕೊಂಡಿದ್ದವರು ನಿಶ್ಚಯವಾಗಿ ಅಲ್ಲಿಯ ಪೋಲೀಸ ಸೂಪರಿಂಟೆಂಡೆಂಟು ಮತ್ತು ಪೋಲೀಸು ಜವಾನರು ಎಂಬ ವಿಷಯವನ್ನು ಅವನು ತಿಳಿಯದೆ ಹೋದನು. ತಮಗೆ ಸಿಗಬೇಕಾಗಿರುವ ಕಳ್ಳನು ಇವನೇ ಎಂದು ನಿಶ್ಚಯಿಸಿಕೊಂಡು ಗುರುದ್ವಾರದ ಸತ್ಸಂಗಕ್ಕೂ ಕಾವಲನ್ನಿಟ್ಟು ಅವನನ್ನು ಹಿಡಿದರು. ಇವನು ಬಹಳ ಕಳ್ಳತನಗಳನ್ನು ಮಾಡಿರುವನಂತೆ ೧೯೩೩ ರಲ್ಲಿ ಇಬ್ಬರು ಪೋಲೀಸು ಜವಾನರನ್ನು ಕೊಂದು ಮತ್ತೊಬ್ಬ ಪೋಲೀಸು ಜವಾನನ ಕುದುರೆ ಮೇಲೆ ಹತ್ತಿಕೊಂಡು ತಪ್ಪಿಸಿಕೊಂಡವನು.

ದೇವರುಗಳು

ದೇವರುಗಳು ಬಹಳ ಮಂದಿ ಇರುವರು ಇವರಿಗೆ ಕುಲಾಚಾರಗಳು, ಜಾತಿಗಳು, ಕೂಡ ಇವೆ. ಒಂದು ಹಿಂದೂ ದೇಶದಲ್ಲಿಯೇ ಅನೇಕ ಮಂದಿ ದೇವರುಗಳಿರುವರು.

ಈ ಕಾಲದಲ್ಲಿ ದೇವರ ಉಪಯೋಗವು ಹೆಚ್ಚಾಗಿರುವದಿಲ್ಲ. ಆದರೆ ದೇವರುಗಳನ್ನು ನಂಬಿರುವ ಕೆಲವರಿಗೆ ಜೀವನವು ಸರಿಯಾಗಿ ನಡೆಯುತ್ತಿದೆ. ಪೂಜಾರಿಗಳು ಬ್ರಾಹ್ಮಣರು, ಮಠಾಧಿಪತಿಗಳು ಇಂಥವರು ಇವರಲ್ಲಿ ಮುಖ್ಯರಾದವರು.

ಪಾಲಿಸುವ ಸರ್ಕಾರದವರಿಗೂ ದೇವರುಗಳಿಗೂ ಯಾವ ಸಂಬಂಧವೂ ಇರುವದಿಲ್ಲ. ಇಂಡಿಯಾದಲ್ಲಿ ಮತ ವಿಷಯದಲ್ಲಿ ಪ್ರವೇಶಿಸುವದಿಲ್ಲವೆಂದು ಶ್ರೀ ವಿಕ್ಟೋರಿಯಾ ಮಹಾರಾಣಿಯವರು ಹಿಂದೆ ತಿಳಿಸಿದ್ದರು. ಇದನ್ನು ಆಧಾರಮಾಡಿಕೊಂಡು ಸನಾತನರು ತಮ್ಮ ಉದ್ದೇಶ್ಯವನ್ನು ತಿಳಿಸುವರಾಗಲಿ ಅದರಿಂದ ಪ್ರಯೋಜನವಿಲ್ಲ. ೫೦ ವರ್ಷಗಳ ಹಿಂದಿನ ಪರಿಸ್ಥಿತಿಗಳು ಈಗ ಇದೆಯೇ?

ಆದರೂ ಇಂದಿಗೂ ಕೋರ್ಟುಗಳಲ್ಲಿ ಪ್ರಮಾಣವನ್ನು ಮಾಡುವಾಗ ಈ ದೇವರುಗಳು ಉಪಯೋಗವಾಗುತ್ತಿರುವರು. [ಯು. ವಾ.

ಂ ಂ

ಮರದ ಪ್ರಯೋಜನಗಳು

ಮರದಲ್ಲಿ ೨೨೦೦೦ ಬಗೆಗಳಿವೆ. ಮರದಿಂದ ಸಕ್ಕರೆಯನ್ನು ತಯಾರಿಸಬಹುದು ೫೦ ಟನ್‌ಗಳ ಮರದಿಂದ ಒಂದು ಟನ್ ಸಕ್ಕರೆಯನ್ನು ತಯಾರಿಸಬಹುದು.

ಮರವನ್ನು ಸುಟ್ಟಾಗ ಒರುವ ಗ್ಯಾಸಿನಿಂದ ಮೋಟಾರುಗಳನ್ನು ನಡಿಸಬಹುದು. ಆ ಮೋಟಾರುಗಳು ಗಂಟೆಗೆ ೫೫ ಮೈಲುಗಳಂತೆ ನಡೆಯಬಲ್ಲವು.

ಮರದಿಂದ ಕಟ್ಟಿದ ಮನೆಗಳನ್ನು ಸುಡದಂತೆ ಮಾಡಬಹುದು.

ಮರದಿಂದ ರಬ್ಬರನ್ನು ತಯಾರಿಸಬಹುದು. ಮರದಿಂದ ಇಟ್ಟಿಗೆಗಳನ್ನು ಕೂಡ ತಯಾರಿಸಬಹುದು.

ಂ ಂ

ಕ್ಲಬ್ಬಿನ ಮರ್ಯಾದೆ

ಮೇರೀಫಿಕ್ಫರ್ಡ್‌ಳು ಹೆಸರುವಾಸಿಯಾದ ಸಿನೀಮಾ ನಟಿಯು ಈಕೆ ಕೋಟೀಶ್ವರಳು.

ಹಾಲಿವುಡ್ಡು ಅಮೇರಿಕದಲ್ಲಿ ಪ್ರಸಿದ್ಧ ಫಿಲಂ ಪಟ್ಟಣ ಅಲ್ಲಿ ವೇಫೆಲ್ ಎಂಬ ಕ್ಲಬ್ಬು ಒಂದಿರುತ್ತದೆ. ಆ ಕ್ಲಬ್ಬಿನ ಮೆಂಬರು ಮೇರಿ. ಆದರೆ ಅಕೆ ಅಕಸ್ಮಾತ್ತಾಗಿ ಒಂದು ತಿಂಗಳ ಚಂದಾವನ್ನು ಕ್ಲಬ್ಬಿಗೆ ಸಲ್ಲಿಸಲು ಮರೆತು ಹೋದಳು. ಕಳೆದವಾರ ಆ ಕ್ಲಬ್ಬಿನಲ್ಲಿ ಒಂದು ಟೀ ಪಾರ್ಟಿಯನ್ನು ಮಾಡಿದ್ದರು. ಅಕೆಯು ಹೋದಳು. ಆದರೆ ಜವಾನನು ಒಳಗೆ ಬಿಡಲಿಲ್ಲ. ಈಗ ಚಂದಾ ಕೊಡುತ್ತೇನೆಂದು ಹೇಳಿದಳು. ಒಪ್ಪಲಿಲ್ಲ, ಜವಾನನು ಮೇರಿಯು ಹಿಂತಿರುಗಿ ಹೋದಳು.

ಅದು ಅಲ್ಲಿಯ ಕ್ಲಬ್ಬಿನ ಮರ್ಯಾದೆ. ನಮ್ಮ ದೇಶದಲ್ಲಿ ಕ್ಲಬ್ಬುಗಳಿವೆ. ವರ್ಷಗಟ್ಟಲೆ ಚಂದಾ ಸಲ್ಲಿಸದ ಮೆಂಬರುಗಳು ಕೂಡಾ ಇರುತ್ತಾರೆ.

ಇದೇ ಅಲ್ಲಿಯವರಿಗೂ ನಮಗೂ ಇರುವ ಬೇಧ.

ತಾ॥ ೨೧ ಕ್ಕೆ ರೋಮ್ ನಗರದ ಜನ್ಮೋತ್ಸವದ ಆಚರಣೆಯು ರೋಮ್ ನಗರದಲ್ಲಿ ವಿಜೃಂಭಣೆಯಿಂದ ನಡೆಯಿತು. ಈ ಸಮಯದಲ್ಲಿ ಮುಸೋಲಿನಿಯವರು ೧,೮೦೦೦೦ ಜನರ ಪ್ರಚಂಡ ಕೂಟಕ್ಕೆ ಉತ್ಸಾಹಭರಿತವಾದ ಭಾಷಣ ಮಾಡಿದರು. 'ಅನೇಕ ದಿವಸಗಳ ಕಷ್ಟ ತರದ ಸಮುದ್ರ ಪ್ರಯಾಣದನಂತರ ಈಗ ದಡವನ್ನು ಕಾಣಹತ್ತಿರುವೆವು' ಎಂದು ಘೋಷಿಸಿದರು.

ಪ್ರಪಂಚದ ಯಾವ ರಾಷ್ಟ್ರಕ್ಕೂ ಇಲ್ಲದಷ್ಟು ದೊಡ್ಡ ಸಬ್‌ಮೆರಿನ್‌ದಳವನ್ನು ರಷ್ಯದವರು ಗುಪ್ತವಾಗಿ ಶೇಖರಿಸಿಟ್ಟಿದ್ದಾರೆಂದು ಜರ್ಮನಿಯ ನಾವಾಧಿಕಾರಿಯು ತಿಳಿಸುತ್ತಾನೆ. ಇವುಗಳ ಜೊತೆಗೆ ಈ ವರ್ಷವಿನ್ನೂ ವಿಶೇಷವಾಗಿ ಕಟ್ಟುತ್ತಿದ್ದಾರಂತೆ. ಇತರ ರಾಜ್ಯಗಳಲ್ಲಿರುವ ಸಬ್ ಮೆರಿನ್‌ಗಳ ಸಂಖ್ಯೆ ಹೀಗಿವೆ. ಫ್ರಾನ್ಸ್ ನಲ್ಲಿ ೯೧; ಯುನೈಟೆಡ್ ಸ್ಟೇಟ್ಸ್ ೯೦; ಇಟಲಿ ೭೭; ಜಪಾನ್ ೬೭; ಬ್ರಿಟಿಷ್ ೫೬; ಜರ್ಮನಿ ೨೮.

ಭೀಮಾಪರಮಿನ ಪಾಲಕೋಲ ಎಂಬಲ್ಲಿರುವ ವೈಶ್ಯ ಜಾತಿಯ ಯುವಕನೋರ್ವನು ಶ್ರೀ ರಾಮನ ಧ್ಯಾನದಲ್ಲಿ ಲೀನನಾಗಿ ತನ್ನ ದೇಹವನ್ನು ಶ್ರೀ ರಾಮನ ಪಟದ ಎದುರಿಗೆ ಬೆಂಕಿಗೆ ಆಹುತಿಯಾಗಿ ಕೊಟ್ಟನು. ಶ್ರೀರಾಮನ ಪಟವನ್ನು ಗೋಡೆಗೆ ತೂಗಹಾಕಿ ಅದರ ಎದುರಿನಲ್ಲಿನ ಚಿತೆಗೆ ಬೆಂಕಿಯನ್ನು ತಾನೇ ಹೊತ್ತಿಸಿ, ಅದು ಜೆನ್ನಾಗಿ ಉರಿದೊಡನೆ ಮೈಗೆ ಸೀಮೆ ಎಣ್ಣೆ ಸವರಿ ಬೆಂಕಿಯಲ್ಲಿ ಬಿದ್ದನು. ಸುತ್ತಮುತ್ತಲಿನವರು ಇವನ ಈ ಹುಚ್ಚುತನವನ್ನು ನೋದಿ ಓಡಿ ಬಂದು ಬೆಂಕಿಯನ್ನು ಹಾರಿಸುವಷ್ಟರಲ್ಲಿ [ಅವನ ಪ್ರಾಣವು ಹೋಗಿತ್ತು.



ಗಮನಿಸಿರಿ ! ತಪ್ಪದೇ ಓದಿರಿ !!

ಈ ಪತ್ರಿಕೆಯಲ್ಲಿ ಪ್ರತಿವಾರವೂ ಪ್ರಕಟವಾಗುತ್ತಿರುವ ಜೀವಶಾಸ್ತ್ರದ ವಿಚಾರವಾದ ಲೇಖನಗಳೆಲ್ಲವೂ ಪುಸ್ತಕರೂಪದಲ್ಲಿ ಅಚ್ಚಾಗುತ್ತವೆ.

"ಜೀವಶಾಸ್ತ್ರ ತತ್ತ್ವಸಾರ"

ಅಥವಾ

ಸತ್ತವರೆಲ್ಲಿ ?

ಲೇಖಕರು— ಕೆ' ಯವರು.

ಈ ಗಂಥದ ಮೊದಲನೆಯ ಮುದ್ರಣಕ್ಕೆ ಮಿತವಾದ ಸಂಖ್ಯೆಯ ಪ್ರತಿಗಳನ್ನು ಮಾತ್ರ ಅಚ್ಚು ಹಾಕುವ ಏರ್ಪಾಡುಮಾಡಿದೆ. ಬೇಕಾದವರು ಮೊದಲೇ ತಮ್ಮ ಹೆಸರನ್ನು ಎಡಿಟರವರಲ್ಲಿ ರಿಜಿಸ್ಟರ್ ಮಾಡಿಸಬೇಕು. ಅಂಥವರಿಗೆ ಗ್ರಂಥವು ಅಚ್ಚಾಗುತ್ತಲೆ ವಿ. ಪಿ. ಮೂಲಕ ಕಳುಹಿಸಲಾಗುತ್ತದೆ. ಬೆಲೆ ರೂ. ೩

ನೊಂದವರೇ ! ನರುಗುತ್ತಿರುವವರೇ !!
ಇಲ್ಲಿ ಗಮನಿಸಿರಿ !!!

ಮರಣಹೊಂದಿದ ನಿಮ್ಮ ಪ್ರಿಯಬಂಧುಗಳು ಎಲ್ಲಿರುವರು ? ಅವರೊಡನೆ ಸಂಭಾಷಿಸಬಹುದೆ ? ಈ ಅಮೋಘವಾದ ವಿಚಾರವನ್ನು ಮೇಲ್ಕಂಡ ಪುಸ್ತಕವನ್ನು ಕರಿಸಿಕೊಂಡು ಓದಿ ತಿಳಿಯಿರಿ. ಈ ವಿಶೇಷವಾದ ದುಃಖಶಮನವನ್ನು ಹೊಂದರೇ ಇರಬೇಡಿ. ಕೂಡಲೇ ಎಡಿಟರವರಲ್ಲಿ ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿ ರಿಜಿಸ್ಟರ್ ಮಾಡಿಸಿರಿ.

"ಸತ್ಯವಾದಿ ಆಫೀಸು"
ಚಾಮರಾಜಪುರಂ, ಮೈಸೂರು.

ಚಿಂತಿಸಬೇಡಿ

ನಿಮ್ಮ ಅದೃಷ್ಟವು ಏನೋ ಹೇಗೋ ಎಂದು ವ್ಯರ್ಥ ಚಿಂತಿಸಬೇಡಿ. ಮುಂದೆ ಬರುವುದನ್ನು ತಿಳಿದುಕೊಂಡು ಸುಖಮಾರ್ಗವನ್ನು ಕಲ್ಪಿಸಿಕೊಳ್ಳಿರಿ. ನಿಮ್ಮ ಜಾತಕದ ನಕಲನ್ನೋ, ಹುಟ್ಟಿದ ಕಾಲವನ್ನೋ ಇಲ್ಲವೆ ನೀವು ಕಾಗದ ಬರೆಯುವ ಕಾಲವನ್ನೊ ತಿಳಿಸಿರಿ, ನಿಮಗೆ ಬೇಕಾದ ಐದು ಪ್ರಶ್ನೆಗಳನ್ನು ಕೇಳಿರಿ. ಶೀಘ್ರಕರವಾಗಿ ಉತ್ತರವನ್ನು ಕಳುಹಿಸುವೆವು. ಫೀಜು ಒಬ್ಬರಿಗೆ ೧—೪—೦ ರೂಪಾಯಿ ಮಾತ್ರ

ತಾಜಕ ಜ್ಯೋತಿಷ್ಕರು,
೧೦೬೮ ಚಾಮರಾಜ ಅಗ್ರಹಾರ, ಮೈಸೂರು

ನೀರಿನಿಂದ! ಹಣವನ್ನು ಶೇಖರಿಸಿ!

ನಿಮ್ಮ ಸೋಡಾ ಫೌಂಟನ್ನನ್ನು
ಈಗಲೇ
ಕೊಂಡುಕೊಳ್ಳಿ

H. SASSEN & CO.,
15 Armenian Street, Post Box 163
G. T. MADRAS

Wanted

Agents with Pay and Allowances
to canvass subscribers and advertisers for

Satyavadi

Apply in person or through post to
The Manager,
Satyavadi Office, Satyavadi Buildings,
Chamarajpuram, Mysore.

shanmukhavilas Coffee Club

Jaganmohan Palace Road
M Y S O R E

— for —

EXCELLENT TIFFIN, & COFFEE

Shiromani NARAYANACHARYA
Chowkambha, Benarese.

S.U.N. & CO.
BENARES CITY

ಶಾಸ್ತ್ರಿಗಳೇ ! ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ- ಅದಕ್ಕೆ ಕಾರಣವೇನು ? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನುಫಲ ? ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು ? ಅದು ಲೋಕಪ್ರಸಿದ್ಧಿಹೊಂದಿದ ನಮ್ಮ ಕಾಶೀ ಚೌಖಂಭಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ರುದ್ರಾಕ್ಷಿಯೇ ದೊರೆಯುವುದು.

ಸಣ್ಣ ಆಡ್ಡೆ ಪ್ರಮಾಣದ ೫ ಮುಖದ ಕಂಠಿಸರ 1 ಕ್ಕೆ ಆಣೆ 3 ರಿಂದ ರೂ 25 ರವರಿಗೆ; 100 ರುದ್ರಾಕ್ಷಿಗಳುಳ್ಳಸರ 1 ಕ್ಕೆ ಆಣೆ 3 ರಿಂದ ರೂ. 25 ರವರೆಗೆ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ 50 ರವರಿಗೆ; ಮತ್ತು 3--4--6--7--8 ಮುಖಗಳ ಕಾಳು ಆಣೆ 4 ರಿಂದ ರೂ 10 ರವರಿಗೆ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ 2 ರಿಂದ 30 ರವರಿಗೆ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರಿಗೆ. ಸಣ್ಣ ರುದ್ರಾಕ್ಷೀ ಅವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ; ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತಾ ಕ್ರಯ ಜಾಸ್ತಿ ಆಗುವುದು. [ವಿವರಕ್ಕೆ ಕಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು : 1 ವಿಶ್ವೇಶ್ವರ ಪಠ, 1 ಕಾಶೀನಕ್ಷೆ, 1 ಕ್ಯಾಟಲಾಗಿನೊಡನೆ 3 ಇನಾಮುಗಳು--

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಿಸ್ [ಕಾಶಿ]

ಶಕ್ತಿಸಾಧನೆಯ ಸುಲಭೋಪಾಯಗಳು.

ಶಕ್ತಿಯೂ ಆರೋಗ್ಯವೂ ಪರಸ್ಪರ ಸಂಬಂಧವಿರುವ ಎರಡು ತತ್ವಗಳು. ಆರೋಗ್ಯವಿಲ್ಲದೇ ಶಕ್ತಿಯು ಹೆಚ್ಚಲಾರದು. ಶಕ್ತಿಯು ಇಲ್ಲದಿದ್ದರೆ ಆರೋಗ್ಯವಿರುವ ಸಂಭವವೂ ಕಡಮೆ. ಆದ್ದರಿಂದ ಮನುಷ್ಯನಿಗೆ ಶರೀರದಲ್ಲಿ ಆರೋಗ್ಯವೂ ಶಕ್ತಿಯೂ ಅತಿ ಮುಖ್ಯವಾದುವು ; ಇವೆರಡೂ ಇದ್ದಲ್ಲಿ ಮನುಷ್ಯನು ಯಾವ ಕೆಲಸವನ್ನಾದರೂ ನಿರಾಯಾಸವಾಗಿ ಮಾಡಬಲ್ಲನು.

ಹಣವನ್ನು ಸಂಪಾದಿಸುವುದಕ್ಕಾಗಿ ದುಡಿಯಬೇಕಾದರೆ ಶಕ್ತಿಯೂ ಆರೋಗ್ಯವೂ ಇಲ್ಲದೆ ಸಾಧ್ಯವಿಲ್ಲ. ಪಾರಮಾರ್ಥಿಕ ದೃಷ್ಟಿಯಿಂದ ನೋಡಿದರೂ ವ್ರತ, ನಿಯಮ, ಭಗವದ್ಧ್ಯಾನ, ಯೋಗಾಭ್ಯಾಸಾದಿಗಳನ್ನು ಮಾಡಿ ಮೋಕ್ಷವನ್ನು ಹೊಂದುವುದಕ್ಕೂ ಶಕ್ತಿಯುು ಅತ್ಯಗತ್ಯವಾದುದು. ಸಾಂಸಾರಿಕ ರೀತಿಯಿಂದ ಇಹಲೋಕ ಸುಖಾಪೇಕ್ಷಿಗಳಾದವರಿಗೆ ತಮ್ಮ ಇಚ್ಛಿತವಾದ ವಿಷಯ ಸುಖಾದಿಗಳ ಉಪಭೋಗೇಚ್ಛೆಯಂತೆ ಸಂಪೂರ್ಣವಾಗಿ ಶಕ್ತಿಯುು ಇರಲೇಬೇಕು. ಮಾನವನಿಗೆ ಅದೊಂದು ಜೀವನದ ತತ್ವವಾದ ಶಕ್ತಿಯುು ಯಾರಿಗೆ ಬೇಡ ? ಎಲ್ಲರಿಗೂ ಬೇಕೇಬೇಕು. ವಿದ್ಯಾರ್ಥಿಗಳಿಗೆ ತಾವು ಕಲಿತ ಪಾಠಗಳನ್ನು ಜ್ಞಾಪಕದಲ್ಲಿ ನಿಲ್ಲುವಂತೆ ಮಾಡುವುದು ಶಕ್ತಿ ! ಯುವಕ ಯುವತಿಯರಿಗೆ ತಮ್ಮ ಯೌವನದ ಪ್ರಯೋಜನವನ್ನು ಸಂಪೂರ್ಣವಾಗಿ ಹೊಂದುವಂತೆ ಮಾಡುವುದು ಶಕ್ತಿ ! ವೃದ್ಧರಿಗೂ ಕೂಡ ಶರೀರವು ದೃಢವಾಗಿ ಬಲಹೀನತೆ ಇಲ್ಲದಂತೆ ಕಾಪಾಡುವುದೂ ಶಕ್ತಿ ! ಸಂಗೀತಗಾರರು ತಮ್ಮ ಮನೋಧರ್ಮವನ್ನು ಯಥಾಸ್ಥಿತಿಯಾಗಿ ವ್ಯಕ್ತಪಡಿಸಿ ತಮ್ಮ ವಿದ್ಯೆಯ ಸಾಮರ್ಥ್ಯವನ್ನು ಸಭಿಕರಿಗೆ ತೋರುವಂತೆ ಮಾಡಲು ಶಾರೀರವು ಏಕರೀತಿಯಲ್ಲಿರುವಂತೆ ಮಾಡುವುದು ಶಕ್ತಿ ! ದೇಶದೇಶಾಂತರಗಳಲ್ಲಿ ಪ್ರಯಾಣಮಾಡುವ ವ್ಯಾಪಾರಸ್ಥರೇ ಮೊದಲಾದವರ ಆರೋಗ್ಯವು ಕೆಡದಂತೆ ಮಾಡುವುದೂ ಶಕ್ತಿಯೇ ! ಹೆಚ್ಚೇಕೆ --ಮನುಷ್ಯ ಮಾತ್ರದವರಿಗೆ ಯಾವ ವಿಧದಿಂದ ನೋಡಿದರೂ ಶಕ್ತಿಯು ಅವಶ್ಯಕವು.

ಶಕ್ತಿಯಿದ್ದವನಿಗೆ ಎಲ್ಲವೂ ಸಾಧ್ಯವು. ಶಕ್ತಿಯು ದೆಸೆಯಿಂದ ಭಾರತದಲ್ಲಿ ಮಹಾವೀರನೆಂದು ಪ್ರಸಿದ್ಧಿಪಡೆದ ಅರ್ಜುನನು ಪರಮೇಶ್ವರನೊಡನೆ ಯುದ್ಧಮಾಡಿ ಅತನನ್ನು ಒಲಿಸಿಕೊಂಡನು. ಶಕ್ತಿಯು ದೆಸೆಯಿಂದಲೇ ಭೀಮನು ಅತ್ಯಂತ ಪರಾಕ್ರಮಶಾಲಿಗಳಾದ ಜರಾಸಂಧ ದುರ್ಯೋಧನಾದಿಗಳನ್ನು ಗೆದ್ದನು. ಶಕ್ತಿಯೇ ಹನುಮಂತನಿಗೆ ಬಲಾಢ್ಯನೆಂಬ ಕೀರ್ತಿಯನ್ನು ತಂದಿಟ್ಟಿದ್ದು. ರಾವಣ ಹಿರಣ್ಯಾಕ್ಷ ಮೊದಲಾದವರು ದೇವತೆಗಳನ್ನು ಕೂಡ ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸಹಾಯವಾಡಿದುದೂ ಶಕ್ತಿಯೇ ! ಶಕ್ತಿಯ ದೆಸೆಯಿಂದ ನೆಪೋಲಿಯನನು ಪ್ರಪಂಚವನ್ನೇ ಗೆಲ್ಲುವ ಸಾಹಸಿಯೆಂದು ಖ್ಯಾತಿಗೊಂಡಿದ್ದು. ಮೈಸೂರು ಹುಲಿ ಎಂದು ಪ್ರಸಿದ್ಧನಾದ ಟಿಪ್ಪುಸುಲ್ತಾನನ ಕೀರ್ತಿಗೂ ಶಕ್ತಿಯೇ ಮೂಲಕಾರಣವಲ್ಲವೇ ?

ಇಂತಹ ಅದ್ಭುತವಾದ ಮತ್ತು ಅಸಾಧಾರಣವಾದ ಮಹಿಮೆಯುಳ್ಳದ್ದು ಶಕ್ತಿಯು. ಶಕ್ತಿವಂತರಾಗಿಯೂ, ಆರೋಗ್ಯವಂತರಾಗಿಯೂ ಇರಬೇಕೆಂಬ ಆಶೆಯು ಪ್ರತಿಯೊಬ್ಬರಿಗೂ ಉಂಟಾಗುವುದು ಸಹಜವಷ್ಟೆ. ಪೂರ್ಣ ಬಲಶಾಲಿಗಳಾಗಿಯೂ, ಆರೋಗ್ಯವಂತರಾಗಿಯೂ ಇರುವುದಕ್ಕೆ ನಮ್ಮ ಸುಪ್ರಸಿದ್ಧವಾದ ಸೇವಿಸಿರಿ. ಇದರ ಸೇವನೆಯು ನಿಮ್ಮನ್ನು ಆರೋಗ್ಯವಂತರಾಗಿಯೂ, ವಜ್ರಕಾಯಕರನ್ನಾಗಿಯೂ ಮಾಡುವುದು. ಇದು ಪ್ರಾಚೀನ ವೈದ್ಯಗ್ರಂಥಗಳ ಶೋಧನೆಯಿಂದ ತಯಾರಿಸಲ್ಪಟ್ಟಿದೆ. ಅನೇಕರು ಇದನ್ನು ಸೇವನೆಮಾಡಿ ತುಂಬಾ ಪ್ರಯೋಜನಹೊಂದಿ ಪ್ರಶಂಸಿಸಿರುತ್ತಾರೆ. ಇದರ ಶ್ರೇಷ್ಠತೆಯ ಸಲುವಾಗಿ ಅನೇಕ ವಸ್ತುಪ್ರದರ್ಶನಗಳಲ್ಲಿ ಮೆಡಲುಗಳೂ, ಸರ್ಟಿಫಿಕೇಟುಗಳೂ ಒಂದಿರುತ್ತವೆ. ಯಾವ ಮತಾಚಾರಕ್ಕೂ ವಿರುದ್ಧವಿಲ್ಲದ, ಕೇವಲ ಶಕ್ತಿವರ್ಧಕ ಮತ್ತು ಪೌಷ್ಟಿಕಗುಣಗಳುಳ್ಳ ಅಮೋಘ ವನಸ್ಪತಿಗಳಿಂದ ತಯಾರಾದುದು. ಇದರಲ್ಲಿ ಅಪಾಯಕರವಾದ ಯಾವ ವಸ್ತುವೂ ಇಲ್ಲ.

ಶಕ್ತಿಸುಧೆಯನ್ನು ಸೇವಿಸುವಷ್ಟಕಾಲದಲ್ಲಿ ಆಹಾರ ಪಾನೀಯ ನಿಯಮವಾಗಲೀ, ಕಠಿಣ ಪಥ್ಯವಾಗಲಿ ಇಲ್ಲ ಸರ್ವಸಾಧಾರಣ ಆರೋಗ್ಯ ನಿಯಮಗಳನ್ನು ಅನುಸರಿಸಿದರೆ ಸಾಕು ; ಯುಕ್ತ ಗುಣವು ಸ್ವಲ್ಪ ಕಾಲದಲ್ಲಿಯೇ ಕಂಡುಬರುವುದು.

ಸತ್ಯವಾದಿ

ವಾರಪತ್ರಿಕೆಯನ್ನು ಓದಿ ಆನಂದಿಸಿರಿ

ವಿವಿಧ ವಿಚಾರಗಳಿಂದ ವಿರಾಜಿಸುತ್ತದೆ.

ತಾತ್ಕಾಲಿಕ ಉಪಯುಕ್ತ ಮತ್ತು ದೀರ್ಘಹಿತದಾಯಕವಾದ
ಅನೇಕಾನೇಕ ವಿಷಯಗಳನ್ನೂ

ರಸವತ್ತಾದ ಕಥೆಗಳನ್ನೂ, ಹಾಸ್ಯಲಹರಿಯನ್ನೂ,
ದೇಶ ವಿದೇಶ ವರ್ತಮಾನಗಳನ್ನೂ ಒಳಗೊಂಡಿರುತ್ತದೆ.

ಸನಾತನಧರ್ಮವಿಚಾರಗಳು ಪ್ರಕಟಿಸಲ್ಪಡುವುವು.

ವಾರ್ಷಿಕ ಚಂದ

ಸ್ಥಳಕ್ಕೆ 1—0—0
(ಅಂಚೆವೆಚ್ಚ ಸೇರಿ) ಪರಸ್ಥಳಕ್ಕೆ 1—10—0 ಬಿಡಿಪ್ರತಿ ೩ ಪೈ

ನಮ್ಮಲ್ಲಿ ಎಲ್ಲಾ ವಿಧವಾದ ಮುದ್ರಣ ಕೆಲಸಗಳೂ ಸುಲಭಚಾರ್ಜಿಗೆ ಸಕಾಲಕ್ಕೆ ಮಾಡಿಕೊಡಲ್ಪಡುತ್ತವೆ.

ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು.

ಶಕ್ತಿಸುಧಾ

ಬಾಲ್ಯದಲ್ಲಿ ಅವಿಚಾರದ ದೆಸೆಯಿಂದಲಾಗಲಿ, ಅತಿ ಸಂಭೋಗದಿಂದಾಗಲೀ ವೀರ್ಯವನ್ನು ಕಳೆದುಕೊಂಡು, ತೇಜೋಹೀನರೂ, ಬಲಹೀನರೂ ಆದವರಿಗೆ "**ಶಕ್ತಿಸುಧೆ**" ಯು ನವತೇಜಸ್ಸನ್ನೂ ಬಲಶುಷ್ಟಿ ಪುಷ್ಟಿಯನ್ನೂ ಉಂಟುಮಾಡುತ್ತದೆ. ಇದು ಸಕಲ ವಿಧವಾದ ಧಾತುವಿಕಾರಗಳಿಗೆ ರಾಮಬಾಣವು

ಸಹಜವಾದ ಅಶಕ್ತತೆಯಿಂದಾಗಲೀ, ವಯೋಧರ್ಮದಿಂದಾಗಲೀ, ಇಂದ್ರಿಯ ದೌರ್ಬಲ್ಯವನ್ನು ಹೊಂದಿ, ಮನೋವ್ಯಥೆಯಿಂದ ಪೀಡಿತರಾದವರಿಗೆ "**ಶಕ್ತಿಸುಧೆ**" ಯು ನವಚೈತನ್ಯವನ್ನೇ ಉಂಟುಮಾಡಿ, ಉತ್ಸಾಹದಿಂದ ಸುಖವನ್ನು ಅನುಭವಿಸಿ ಆನಂದಪಡಲು ಸಹಾಯವಾಡುತ್ತದೆ.

"**ಶಕ್ತಿಸುಧೆ**" ಯು ರಕ್ತವೃದ್ಧಿಯನ್ನೂ ಧಾತುಪುಷ್ಟಿಯನ್ನೂ ಉಂಟುಮಾಡುವುದು. ಪ್ರತಿಯೊಬ್ಬರೂ, ತಮ್ಮ ತಮ್ಮ ಕೆಲಸಗಳನ್ನು ಆಯಾಸವಿಲ್ಲದೆ ಮಾಡುವಂತೆ ಉತ್ಸಾಹವನ್ನು ಕಂದುಕೊಡುತ್ತದೆ.

ಸ್ತ್ರೀಯರು ಮುಟ್ಟಾಗುವ ಕಾಲದಲ್ಲಿ ಬರುವ ಸೊಂಟನೋವು ಹೊಟ್ಟೆನೋವು, ಅಕ್ರಮಸೂತಕವನ್ನೂ, ನಿಶ್ಯಕ್ತಿಯನ್ನೂ ಗುಣಪಡಿಸಿ ಅವರ ಸೌಜವಾದ ಸೌಂದರ್ಯವನ್ನು ವೃದ್ಧಿಮಾಡುವುದು.

ವಿದ್ಯಾರ್ಥಿಗಳು ಪಾಠಗಳನ್ನು ಜೀರ್ಣವಾಗಿ ಕಲಿಯುವದಕ್ಕೂ, ಕಲಿತದನ್ನು ಮರೆತುಹೋಗದಂತಹ ಒಳ್ಳೆಯ ಜ್ಞಾಪಕಶಕ್ತಿಯಿರುವಂತೆ ಮೆದುಳಿಗೆ ಶಕ್ತಿಯನ್ನು ಕೊಡುವುದಕ್ಕೂ "**ಶಕ್ತಿಸುಧೆ**" ಯು ವರಪ್ರಸಾದವು

ಅಜೀರ್ಣ, ಅಗ್ನಿಮಾಂದ್ಯ ಮಲಬದ್ಧತೆ, ಇತ್ಯಾದಿ ಸಾಮಾನ್ಯ ಹೊಟ್ಟೆಯಿಲೆಗಳು ಈ "**ಶಕ್ತಿಸುಧೆ**" ಯನ್ನು ಉಪಯೋಗಿಸುವವರಿಗೆ ಇರುವುದೇ ಇಲ್ಲ.

ಆರೋಗ್ಯವನ್ನು ಕಾಪಾಡಿ ಶಕ್ತಿಯನ್ನು ಹೆಚ್ಚಿಸುವದರಲ್ಲಿ ಅವ್ಯರ್ಥವಾದ "**ಶಕ್ತಿಸುಧೆ**" ಯನ್ನು ಸೇವಿಸಿ ಸರ್ವರೂ ಪ್ರಯೋಜನ ಹೊಂದಿರಿ.

ಬೆಲೆ ಒಂದು ರೂಪಾಯಿ. ಟಪಾಲು ಬೇರೆ. ಚಿಕ್ಕ ಡಬ್ಬಿ 4 ಆಣೆ

ವಿಳಾಸ,— ಸತ್ಯವಾದಿ ಬಿಲ್ಡಿಂಗ್ಸ್, ಮೈಸೂರು

Weekly Newspaper

SATYAVADI

Every Wednesday

MYSORE (Founded 1917) 29—4—36

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,

ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,

ಅಥವ ಧೂಳು ಮತ್ತು ಬಿಸಿಲಿನಲ್ಲಿ ವ್ಯಾಪಾರಗಳನ್ನು ಮುಗಿಸಿದಮೇಲಾಗಲಿ

ದಣಿದ ದೇಹವನ್ನು

ಯಥಾಸ್ಥಿತಿಗೆ ತರಲು

ಮೈಸೂರು ಗಂಧದ ಸಾಬೂನಿನ

ಶಕ್ತಿವರ್ಧಕ ಸ್ನಾನಕ್ಕೆ

— ಸರಿಸಮವಾದುದು ಮತ್ತಾವುದೂ ಇಲ್ಲ —

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

ಅರುಣೋದಯದ

ವಿಜಯನಗರಸಾಮ್ರಾಜ್ಯ ಸಂಚಿಕೆಯು

ತನ್ನ ಎಲ್ಲ ವೈಭವದೊಂದಿಗೆ ಬೇಗನೆ

ಪೆದುಗರ ಕೈಸೇರುವುದು.

ಅಖಿಲ ಕರ್ನಾಟಕದೊಳಗಿನ ನಿಖ್ಯಾತ ಸಾಹಿತಿಗಳಿಂದ ಒರೆಯಿಲ್ಪಟ್ಟ ವಿದ್ವತ್ಪ್ರಚುರವಾದ ಲೇಖನಗಳಿಂದ ಕೂಡಿದ ಮತ್ತು ವಿವಿಧ ವಿಜಯನಗರ ಸಾಮ್ರಾಜ್ಯದ ವೈಭವವನ್ನು ವ್ಯಕ್ತಪಡಿಸುವ ಅನೇಕ ಅಂದವಾದ ಚಿತ್ರಗಳನ್ನೊಳಗೊಂಡ, ಬರಹಗಾರರ ಅಲ್ಪ ಪರಿಚಯ ಹಾಗು ಭಾವಚಿತ್ರಗಳಿಂದಲೂ ಶೋಭಿಸುವ ಅತ್ಯಂತ ಮಹತ್ವಪೂರ್ಣವಾದ ಹಳಗೂ ಕನ್ನಡಿಗರಿಗೆ ಅತ್ಯಂತ ಅಭಿಮಾನದ ವಿಷಯವಾಗಿರುವ ಜಯಕರ್ನಾಟಕದ ಆಕಾರದ ೨೫೦—೨೫೫ ಪುಟಗಳನ್ನು ಮಿಕ್ಕಿ ಹೊರಡುತ್ತಿರುವ ಹೆಬ್ಬೊತ್ತಿಗೆಯ ಬೆಲೆಯು ಕೇವಲ ೨ ರೂಪಾಯಿ

ಅರುಣೋದಯದ ಚಂದಾದಾರರಿಗೆ ೧—೮—೦ ಮಾತ್ರ

ಬೇಗನೆ ಆರ್ಡರಕೊಟ್ಟು ಸಂಚಿಕೆಯನ್ನು ಕಾದಿಡಲಿಕ್ಕೆ ತಿಳಿಸಬೇಕು.

ಜಾಹೀರಾತುಗಾರರು ಬೇಗನೆ ತಮ್ಮ ತಮ್ಮ ಜಾಹೀರಾತುಗಳನ್ನು ಅಡ್ವಾನ್ಸ ಹಣದೊಂದಿಗೆ ಕಳಿಸಬೇಕೆಂದು ಕೋರುತ್ತೇವೆ.

ಕರ್ನಾಟಕದ ಮುಖ್ಯ ಮುಖ ಕೇಂದ್ರಗಳಲ್ಲಿ ಅದರ ಪ್ರಚಾರಕ್ಕಾಗಿ ಏಜೆಂಟರು ಬೇಕು.

ನೂರಕ್ಕೆ ೧೫ ರಿಂದ ೨೦ ವರೆಗೆ ಕಮಿಷನ್ ಕೊಡಲಾಗುವುದು ಹೊರತಾಗಿ ೨೫ ರೂ. ಬಹುಮಾನ ಆಕರ್ಷಕ ಯೋಜನೆ

ಡಿಪಾಜಿಟ್ ಇಡಲು ಸಮರ್ಥರಿರುವ ಜನರಷ್ಟೇ ಉತ್ತರಕ್ಕಾಗಿ ೧ ಆಣೆ ಸ್ಟಾಂಪನ್ನಿಟ್ಟು ವಿಶೇಷ ಮಾಹಿತಿಗಾಗಿ ಒರೆದುಕೊಳ್ಳಬೇಕು. ಮ್ಯಾನೇಜರ,

ಅರುಣೋದಯ, ಬೆಳಗಾವಿ.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore.

Sadhana Aushadalaya
Dacca (Bengal)

ಸಾಧನ
ಔಷಧಾಲಯ, ಢಕ್ಕ

ಅಧ್ಯಕ್ಷರು--ಭಾಗಲ್ಪುರದ ಮಾಜಿ ರಸಾಯನ ಶಾಸ್ತ್ರ ಪಂಡಿತರಾಗಿದ್ದ ಮು॥ ಜೋಗೀಷಚಂದ್ರ ಘೋಸು ಎಂ. ಎ ಎಫ್. ಸಿ ಎಸ್. ಲಂಡ್.

ಆಯುರ್ವೇದ ಶಾಸ್ತ್ರಕ್ಕೆ ಅನುಸಾರವಾಗಿ ಔಷದಗಳು ತಯಾರಿಸಲ್ಪಡುತ್ತವೆ. ಕ್ಯಾಟಲಾಗು ಉಚಿತವಾಗಿ ಕಳುಹಿಸಲ್ಪಡುತ್ತೆ. ರೋಗ ವಿವರವನ್ನು ತಿಳಿಸಿದರೆ ಫಾರ್ಜಿಲ್ಲದೆ ಸಲಹೆ ಕೊಡಲ್ಪಡುತ್ತೆ.

ಮಕರಧ್ವಜ—ಸಕಲ ರೋಗಗಳನ್ನೂ ನಿವಾರಿಸುತ್ತದೆ. ಸುವರ್ಣ ಮಿಶ್ರವಾದದ್ದು. ವಾತ, ಪಿತ್ತ, ಕಫವನ್ನು ಸಮಪಡಿಸಿ, ದೇಹಕ್ಕೆ ಶಕ್ತಿಯನ್ನೂ, ಆರೋಗ್ಯವನ್ನೂ ಉಂಟುಮಾಡುತ್ತದೆ. ಬೆಲೆ ತೊಲಾಳಿ ರೂಪಾಯಿ.

ಸರೀಬಾದಿಸವ್ಸ—ಪ್ರಮೇಹ, ಸವಾಯಿ ರೋಗಗಳಿಗೆ ಅಮೋಘ ಔಷಧವಾದ ರಸ, ವಿಷವನ್ನು ಪರಿಹರಿಸುತ್ತದೆ. ಎಲ್ಲಾ ಮೂತ್ರ ರೋಗಗಳನ್ನೂ ನಿವಾರಿಸುತ್ತದೆ, ರಕ್ತವನ್ನು ಶುದ್ಧಿಪಡಿಸುತ್ತದೆ. ಬೆಲೆ ಸೇರು ೩ ರೂಪಾಯಿ.

ಶುಕ್ರಸಂಜೀವಿನಿ—ನಪುಂಸಕತ್ವ, ಧಾತು ಕ್ಷೀಣತೆ ಮುಂತಾದ ಧಾತ ವಿಕಾರ ರೋಗಗಳನ್ನೂ ಗುಣಪಡಿಸುವ ಶಕ್ತಿವರ್ಧದ ಔಷಧ ಬೆಲೆ ಸೇರು ೧೬ ರೂಪಾಯಿ.

ಅಬಾಲಾಂಧವಯೋಗ—ನಡುನೋವು, ಮುಟ್ಟುದೋಷ, ಒಂಜೆತನ ಮೊದಲಾದ ಸ್ತ್ರೀಯರ ಎಲ್ಲಾ ಖಾಯಿಲೆಗೂ ದಿವ್ಯೌಷಧ. ಬೆಲೆ ೧೬ ಹೊತ್ತಿಗೆ ೨ ರೂಪಾಯಿ ಮತ್ತು ೫೦ ಹೊತ್ತಿಗೆ ೫ ರೂ.

H. S. KAMAL SHERIFF, DENTSTe
Lansdowne Buildings, Mysore.

We prepare artificial teeth with which any hard substance can be chewed. WI Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfction.

Oriental Pharmacy
Geueral Hospital Road
MYSORE
f0r
Best Uaani Medicines